MYSORE SALES TAX (AMENDMENT) BILL, 1957.

Introduction.

Sri T. MARIAPPA (Minister for Finance).—Sir, I beg to introduce the Mysore Sales Tax (Amendment) Bill, 1957, which has been published in the *Mysore Gazette* under rule 48 of the Rules of Procedure and Conduct of Business in the Mysore Legislative Assembly.

Mr. SPEAKER.—The Mysore Sales Tax (Amendment) Bill, 1957, is introduced.

MOTION ON THE GOVERNOR'S ADDRESS.

(*Debate continued*).

ಶ್ರೀ ಟಿ. ತಾರೇಗೌಡ (ಶಿರ).—ಸಭಾಧ್ಯಕ್ಷರೇ., ನಮ್ಮ ಸಂಸ್ಥಾನದ ರಾಜ್ಯಪಾಲರ ಭಾಷಣದ ಮೇಲೆ ತಂದಿರುವ ಅಭಿನಂದನಾ ನಿರ್ಣಯವನ್ನು ಪುಷ್ಟೀಕರಿಸುತ್ತಾ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮ್ಮ ಸರ್ಕಾರದ ಗುರಿ ದೇಶದ ಎಲ್ಲ ಜನರಿಗೂ ಅನ್ನ, ಬಟ್ಟೆ, ವಸತಿ, ಆರೋಗ್ಯ ವಿದ್ಯಾಭ್ಯಾಸ ಮುಂತಾದ ಸೌಲಭ್ಯಗಳನ್ನು ಒದಗಿಸತಕ್ಕದ್ದಾಗಿರುತ್ತದೆ. ಜೊತೆಗೆ ನಮ್ಮ ದೇಶದಲ್ಲಿ ಸಮಾಜವಾದೀ ಸಮಾಜ ರಚನೆಯೂ ಆಗಬೇಕೆಂಬುದು ನಮ್ಮ ಉದ್ದೇಶ. ಮೊದಲಿನ ಮೂಲ ಗುರಿಯ ಸಾಧನೆಗಾಗಿ ನಮ್ಮಸಂಸ್ಥಾನದಲ್ಲಿ ಪ್ರಜಾಸರ್ಕಾರ ಬಂದ ಮೇಲೆ ಕರ್ತವ್ಯಮಗ್ನರಾಗಿರುವುದು ಕಂಡುಬಂದಿದೆ. ದೇಶದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡು ಅವುಗಳನ್ನು ಸಾಧಿಸುತ್ತಾ ಬಂದಿದೆ. ಅನೇಕ ದೊಡ್ಡ ಪ್ರಾಜೆಕ್ಟುಗಳನ್ನೂ ಮೇಜರ್ ಮತ್ತು ಮೈನರ್ ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಕೈಕೊಂಡು ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದೇ ಸಂದರ್ಭದಲ್ಲಿ ವ್ಯವಸಾಯಗಾರರಿಗೆ ಋಣಭಾದೆಯನ್ನು ತಪ್ಪಿಸಲು ಸಹಕಾರ ಸಂಘಗಳ ಮೂಲಕ short term loan, medium term loan ಮತ್ತು long term loan ಗಳನ್ನು ಕೊಡುವ ವ್ಯವಸ್ಥೆಮಾಡಿದ್ದಾರೆ. ಜನರಿಗೆ ವ್ಯಾಪಾರ ಮತ್ತು ಸಂಚಾರ ಸೌಕರ್ಯಗಳನ್ನೊದಗಿಸಲು ಅನೇಕ ರಸ್ತೆಗಳನ್ನು ಏರ್ಪಡಿಸಿದ್ದಾರೆ. ಆಸ್ಪತ್ರೆಗಳು, ಪ್ರೈಮರಿ ಮತ್ತು ಮಾಧ್ಯಮಿಕ ಪಾಠಶಾಲೆಗಳು ದೇಶದಲ್ಲಿ ಹೆಚ್ಚು ಹೆಚ್ಚಾಗಿ ಆಗುತ್ತಲಿವೆ. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕಾಗಿಯೂ, ಪಾರಿಭಾಷಿಕ ಶಿಕ್ಷಣಕ್ಕಾಗಿಯೂ ಹೊಸ ಕಾಲೇಜುಗಳು ಸ್ಥಾಪಿತವಾಗಿ 1947 ನೆಯ ಇಸವಿಯಿಂದ ಇದುವರೆಗೂ ಹೆಚ್ಚಿನ ಪ್ರಗತಿಯನ್ನು ಸಾಧಿಸುತ್ತಿರುವುದನ್ನು ನಾವು ಕಾಣುತ್ತಲಿದ್ದೇವೆ. ಇಷ್ಟಾದರೂ ಈಗಲೂ ಟೆಕ್ನಿಕಲ್ ಕಾಲೇಜುಗಳಲ್ಲಿ ಎಷ್ಟೋ ಜನ ವಿದ್ಯಾವಂತರು ಸ್ಥಳದ ಅವಕಾಶವಿಲ್ಲದೆ ಕಷ್ಟಪಡುತ್ತಿದ್ದಾರೆ. ಇನ್ನೊಂದು ಕಡೆ ನಿರುದ್ಯೋಗ ಸಮಸ್ಯೆಯೂ ಬೃಹದ್ರೂಪವನ್ನು ತಾಳಿದೆ. ಇದರ ನಿವಾರಣೆಯ ಉದ್ದೇಶದಿಂದ ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಟೆಕ್ನಿಕಲ್ ಶಾಲೆಗಳನ್ನು ಹೆಚ್ಚಿಸಲು ಆದಷ್ಟುಮಟ್ಟಿಗೆ ಪ್ರಯತ್ನಿಸಲಾಗಿದೆ. ಇಷ್ಟೆಲ್ಲಾ ಮಾಡಿದ್ದರೂ ಸೋಷಿಯಲಿಸ್ಟ್ ಪ್ಯಾಟರ್ನ್ ಉಳ್ಳ ಸಮಾಜದ ರಚನೆ ಇನ್ನೂ ಆಗಲಿಲ್ಲವಲ್ಲ, ಪ್ರಜಾ ಸರ್ಕಾರ ಬಂದು ಹತ್ತುವರ್ಷಗಳಾದರೂ ಈ ಗುರಿಯನ್ನು ಸಾಧಿಸಲಿಲ್ಲವಲ್ಲ ಎಂದು ನಮ್ಮ ಸ್ನೇಹಿತರುಗಳು ಉಗ್ರವಾಗಿ ಟೀಕೆಮಾಡುತ್ತಿದ್ದಾರೆ. ಹೀಗೆ ಅವರು ಹೇಳುವುದರಲ್ಲಿ ಅವರು ಕೊಡತಕ್ಕ ರಚನಾತ್ಮಕ ಟೀಕೆಗಳಿಗೆ ಸದಾ ನಮ್ಮ ಮಾನ್ಯತೆಯಿದೆ. ಅವರು ಮಾಡಿರುವ ನ್ಯಾಯವಾದ ಟೀಕೆಗಳನ್ನು ಉಪಯೋಗಿಸಿಕೊಂಡು ಆಡಳಿತದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾದದ್ದು ಅತ್ಯಗತ್ಯವೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕು. ದೇಶದಲ್ಲಿ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವ ದೃಷ್ಟಿಯಿಂದ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕೈಕೊಳ್ಳುವುದರ ಜೊತೆಗೆ ಮೇಜರ್ ಮತ್ತು ಮೈನರ್ ಕೆರೆಗಳ ಕಾಮಗಾರಿಗಳನ್ನೂ ಕೈಕೊಳ್ಳುವುದು ಅಗತ್ಯವಾಗಿದೆ. ಈ ದೃಷ್ಟಿಯಿಂದ, ಧರ್ಮ ಪ್ರಾಜೆಕ್ಟ್, ಹಗರಿ ಪ್ರಾಜೆಕ್ಟ್ ಮತ್ತು ಲಕ್ಷ್ಮಣತೀರ್ಥ ಪ್ರಾಜೆಕ್ಟ್ ಮುಂತಾದುವುಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಇನ್ನೂ ಅನೇಕ ಸಣ್ಣ ಸಣ್ಣ ಪ್ರಾಜೆಕ್ಟ್‌ಗಳನ್ನೂ ತೆಗೆದುಕೊಳ್ಳುವುದು ಅತ್ಯಗತ್ಯ. ನಮ್ಮ ಸಿರಾ ಕ್ಷೇತ್ರಕ್ಕೆ ಹತ್ತಿರದಲ್ಲಿ ಪಾವುಗಡ ತಾಲ್ಲೂಕಿಗೆ ಹರಿಯುವ ಉತ್ತರ ಪಿನಾಕಿನಿ ನದಿಗೆ ಅಣೆಕಟ್ಟು ಹಾಕುವ (ತಿಮ್ಮಮ್ಮನಹಳ್ಳಿ ಪ್ರಾಜೆಕ್ಟ್) ಯೋಜನೆಯನ್ನು ಕೈಕೊಳ್ಳಬಹುದಾಗಿದೆ. ಆಂಧ್ರದವರು (Perur) ಪೇರೂರಿನ ಹತ್ತಿರ ಕಟ್ಟುತ್ತಿದ್ದಾರೆ. ಪಾವುಗಡದ ಜನರಂತೂ ಅಂಡಮಾನ್ ದ್ವೀಪದಲ್ಲಿರುವಂತಿದ್ದಾರೆ. ಅಲ್ಲಿ ಕೆಲವರ ಮಾತೃಭಾಷೆ ತೆಲುಗು ಆದರೂ ಅವರು ಕನ್ನಡ ದೇಶದಲ್ಲಿರುವ ಆಕಾಂಕ್ಷೆಯುಳ್ಳವರಾಗಿದ್ದಾರೆ. ಅಂಥವರಿಗೆ ನೀರಾವರಿ ಸೌಕರ್ಯಗಳನ್ನೊದಗಿಸಿಕೊಡುವುದು ಅತ್ಯಗತ್ಯ. ಉತ್ತರ ಪಿನಾಕಿನಿ ನದಿಯಲ್ಲಿ ಮಳೆಗಾಲದಲ್ಲಿ ಯಥೇಚ್ಛವಾಗಿ ನೀರು ಹರಿದುಹೋಗುತ್ತಿರುತ್ತದೆ. ಆದ್ದರಿಂದ ಆಂಧ್ರದವರೊಡನೆ ಸಮಾಲೋಚನೆ ನಡೆಸಿ ನಮ್ಮ ಮೈಸೂರು ದೇಶಕ್ಕೆ ದಾಮಾಷಾ ಪ್ರಕಾರ ಎಷ್ಟು ಕ್ಯೂಸೆಕ್ಸ್‌ಗಳು ಬರಬೇಕೋ ಅಷ್ಟು ಬರಮಾಡಿಕೊಳ್ಳುವಂತೆ ಮಾಡಿಕೊಂಡು ತಿಮ್ಮಮ್ಮನಹಳ್ಳಿ ಪ್ರಾಜೆಕ್ಟನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಮಾಡಿದರೆ ಪಾವಗಡ ತಾಲ್ಲೂಕಿನ ರೈತಾಪಿ ಜನರಿಗೆ ನೀರಾವರಿಗೆ ಹೆಚ್ಚಿನ ಅನುಕೂಲಮಾಡಿಕೊಟ್ಟಂತಾಗುತ್ತದೆ. ಇದೇ ರೀತಿ ಪಾವಗಡದಲ್ಲಿ ನಾಗಲಮಡಿಕೆ ಹತ್ತಿರ ಒಂದು ಸೇತುವೆ ಕಟ್ಟಿಸಿ ಕೊಡಬೇಕಾದ್ದಿದೆ. ಹಿರಿಯೂರು ತಾಲ್ಲೂಕಿಗೂ ಶಿರಾ ತಾಲ್ಲೂಕಿನ ಹೆಚ್ಚು ಪ್ರದೇಶಕ್ಕೆ ಅನುಕೂಲವಾಗಲು ಗಾಯತ್ರಿ ರಿಸರ್ವಾಯರ್ (ಕರಿಯಾಲಾ ಪ್ರಾಜೆಕ್ಟ್) ಅಂದಾಜು ರಿವೈಜ್‌ಮಾಡಿ ಬಲ ಭಾಗದ ನಾಲಾ ನನ್ನ ಹುಟ್ಟಿದ ಊರಾದ ತಾವರೆಕೆರೆ ಜಮೀನುಗಳಿಗೂ ನೀರನ್ನು ಒದಗಿಸಲು ಕ್ರಮತೆಗೆದುಕೊಳ್ಳಬೇಕು. ಹಾಗೆ ಗುಬ್ಬಿ ತಾಲ್ಲೂಕಿನ ಮಂಚಲದೊರೆ ಮತ್ತು ಗಂಡಿಕೆರೆ ಬಳ್ಳಿಹಳ್ಳಗಳಿಗೆ ಕೆರೆಗಳನ್ನು ಕಟ್ಟಿ ವ್ಯರ್ಥವಾಗಿ ಜಮೀನುಗಳಿಗೆ ಪ್ರವಾಹದ ಮರಳುತುಂಬುವುದನ್ನು ತಪ್ಪಿಸಿ ನೀರಾವರಿ ಸೌಲಭ್ಯ ಒದಗಿಸಬೇಕು. ಶಿರಾ ತಾಲ್ಲೂಕಿನ ಕಿಲಾರದಳ್ಳಿ ಬಳಿ ಹಳ್ಳಕ್ಕೆ ಒಂದು ಕೆರೆ ಕಟ್ಟಿಸಿಕೊಡ

(ಶ್ರೀ ಟಿ. ತಾರೇಗೌಡ).

ಬೇಕು. ಶಿರಾ ತಾಲ್ಲೂಕು ಲಕ್ಷ್ಮೀಸಾಗರ ಕೆರೆ ಕಳ್ಳಂಬೆಳ್ಳಕೆರೆ, ಬಡಮಾರನಹಳ್ಳಿ ಕೆರೆ ಉತಾವಣಿ ಮಾಡಿಸಿ ಕೊಡಬೇಕು. ಹಾಗೆಯೇ ಮೈನರ್ ಕೆರೆಗಳಾದ ದಂಡಿಕೆರೆ, ಮಾರನಗೆರೆ, ಡ್ಯಾಗೇರಳ್ಳಿ, ನೇಜಂತಿ, ಗೌಡರಗೆರೆ ವಗೈರೆಗಳಿಗೆ ರಿಪೇರಿ ಮಾಡಿ ಉತಾವಣೆಯಾಗಬೇಕು. ಸುವರ್ಣಮುಖಿ ಪ್ರಾಜೆಕ್ಟ್‌ನ್ನು ಮಂಜೂರುಮಾಡಿ ಶಿರಾ ತಾಲ್ಲೂಕು ಹುಣಿಸೆಹಳ್ಳಿ ಬಳಿ ಕೆರೆ ಕಟ್ಟಿಸಿಕೊಡಬೇಕು. ತಾವರೆಕೆರೆ—ಹೊಸೂರು P.W.D. ರಸ್ತೆಯಲ್ಲಿ ತಾವರೆಕೆರೆ ಬಳಿ ಹಳ್ಳಕ್ಕೆ ಒಂದು ಹೈ ಲೆವೆಲ್ ಕಾಸ್‌ವೇ ಮಾಡಿಸಬೇಕು. ಈ ರೀತಿ ಕ್ಷಾಮ ಪ್ರದೇಶವಾದ ಶಿರಾ, ಪಾವುಗಡ ಆ ಪ್ರಾಂತಕ್ಕೆ ಅನುಕೂಲಮಾಡಿಕೊಡಲು ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಪಿಲೆ ಬಾವಿಗಳಿಗೆ ಜಾಗ್ರತೆ ಒದಗಿಸಲು ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದವರಿಗೆ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಜಿ. ಖೋತ (ಸತಲಗ).—ಅಧ್ಯಕ್ಷ ಮಹಾಶಯರೇ, ರಾಜ್ಯಪಾಲರು ಮಂಗಳವಾರ ಹನ್ನೆರಡು ಗಂಟೆಗೆ ಬಂದು ನಮ್ಮೆಲ್ಲರಿಗೂ ಅಂತಃಕರಣಪೂರ್ವಕವಾದ ಸ್ವಾಗತವನ್ನು ಬಯಸಿ ಹೊರಟು ಹೋದರು. ಅವರು ಹೋದರು ; ಆದರೆ ಹೋಗುವಾಗ್ಗೆ ಅವರು ನಮ್ಮ ಮುಂದೆ ಒಂದು ನಿವೇದನೆಯನ್ನು ಮಾತ್ರ ಇಟ್ಟು ಹೋದರು ; ಆ ನಿವೇದನೆಯನ್ನು ನಾವೆಲ್ಲ ವಿಧಾನ ಮಂಡಲದ ಸದಸ್ಯರೂ ಸೇರಿ ಶಾಂತರೀತಿಯಿಂದ ವಿಚಾರಮಾಡಿ ನಮ್ಮ ಅಭಿಪ್ರಾಯದ ಒಂದು ನಿರ್ಣಯ ತೆಗೆದುಕೊಳ್ಳಬೇಕೆಂದು ಆಜ್ಞೆಮಾಡಿದ್ದಾರೆ.

ರಾಜ್ಯಪಾಲರ ಭಾಷಣವನ್ನು ಸೂಕ್ಷ್ಮ ರೀತಿಯಿಂದ ಪರಿಶೀಲನೆಮಾಡಿದ್ದೇ ಆದರೆ, ಅದರಲ್ಲಿ ಸಂಕ್ಷೇಪವಾಗಿ, ಒಂದು ಪ್ರಧಾನ ವಿಷಯ ಕಂಡುಬರುತ್ತದೆ. ಅದೇನೆಂದರೆ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯನ್ನು ರಚನೆ ಮಾಡತಕ್ಕುದರ ದೃಷ್ಟಿಯಿಂದ ನಮ್ಮ ಪಂಚವಾರ್ಷಿಕ ಯೋಜನೆಯನ್ನು ಜಯಪ್ರದವಾಗಿ ಮಾಡಬೇಕು ಎಂಬುದು.

ಮೊದಲನೆಯದಾಗಿ ದೇಶದ ಮುಂದಿಟ್ಟಿರುವ ಮಹತ್ವದ ವಿಷಯವಾದ Socialistic Pattern of Societyಯ ವಿಚಾರವನ್ನೇ ಪರಿಶೀಲನೆ ಮಾಡುವುದಾದರೆ ಮೊದಲು ಸಮಾಜವಾದಿ ಸಮಾಜರಚನೆಯೆಂಬುದರ ಅರ್ಥ ಪರಿಶೀಲನೆ ಮಾಡಬೇಕಾಗುತ್ತದೆ. ಇದರಲ್ಲಿ ಸಮಾಜ ಎಂಬ ಶಬ್ದದ ಅರ್ಥ 'ಸರ್ವ ಸಾಮಾನ್ಯ ಆಚಾರ-ವಿಚಾರದ ಒಂದು ಗುಂಪು' ಎಂದು ಈ ಅರ್ಥದಲ್ಲಿ ನೋಡುವುದಾದರೆ ನಾನಾ ಕೇಂದ್ರ ಗುಂಪುಗಳು ಲಿಂಗಾಯಿತ ಸಮಾಜ, ಜೈನ ಸಮಾಜ, ಬುದ್ಧ ಸಮಾಜ, ಒಕ್ಕಲಿಗ ಸಮಾಜ, ಬ್ರಾಹ್ಮಣ ಸಮಾಜ—ಇತ್ಯಾದಿ ಅನೇಕ ಸಮಾಜಗಳು ಅದರಲ್ಲಿ ಬರುತ್ತವೆ. ಆದರೆ ಸ್ವಲ್ಪ ಸ್ಥೂಲವಾಗಿ ಪರಿಶೀಲನೆ ಮಾಡಿ ನೋಡಿದರೆ ಒಂದು ಮಾನವಸಮಾಜ ಎಂದೂ ಅರ್ಥ ಮಾಡಿಕೊಳ್ಳಬಹುದು. ಇದರಲ್ಲಿ ಈಗ ಸರ್ಕಾರದವರು Socialistic Pattern of Society ರಚನೆ ಮಾಡಬೇಕೆನ್ನುವುದರ ಅರ್ಥ ಮಾನವ ಸಮಾಜದ ಕಲ್ಯಾಣಕ್ಕಾಗಿ ಸಮಾಜವಾದಿ ಸಮಾಜ ರಚನೆಯನ್ನು ಸ್ಥಾಪನೆ ಮಾಡಬೇಕೆಂದು ಭಾವಿಸುವುದಾದರೂ ಇದರ ನಿಷ್ಕೃಷ್ಟವಾದ ಸ್ವರೂಪವೇನು ? What is its origin ? What are the signs and symptoms of such a Society : What is its shape and form ? ಅಂಥ ಸಮಾಜದ ಆಕಾರ, ವಿಕಾರ, ಲಕ್ಷಣಗಳೇನೆಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಜಗತ್ತಿನಲ್ಲಿ ಪ್ರತಿಯೊಂದು ವಸ್ತುವೂ ತನ್ನ ಲಕ್ಷಣದಿಂದ ಲಕ್ಷಿತವಿದೆ. ಅದಕ್ಕೆ ಒಂದು ಸ್ವರೂಪವಿದೆ. ಹಾಗೆಯೇ ಸಮಾಜವಾದಿ ಸಮಾಜಕ್ಕೆ ಲಕ್ಷಣ, ಸ್ವರೂಪವೇನು? ಅದರ ಆಕಾರ, ಅವಸ್ಥಾ ಏನು? ಇದರ ಬಗ್ಗೆ ಯಾವ ತೆರನಾದ್ದೆಂಬುದನ್ನು ಸರ್ಕಾರದವರು ಎಲ್ಲಿಯೂ ತಿಳಿಸಿಲ್ಲ. ರಾಜ್ಯಪಾಲರ ನಿವೇದನೆಯಲ್ಲಿ ಇದೊಂದು ದೊಡ್ಡ ದೋಷವೆಂದು ನಾನು ಹೇಳಬಯಸುತ್ತೇನೆ. ಹೀಗಿರುವಾಗ ನಮ್ಮ ರಾಜ್ಯಕರ್ಮಚಾರಿಗಳು ಯಾವ ರೀತಿ ಮಾರ್ಗದರ್ಶನ ಕೊಡುತ್ತಾರೋ ಗೊತ್ತಿಲ್ಲ. ಮೈಸೂರಿಗೆ ಹೋಗಬೇಕೆಂದರೆ, ಮೈಸೂರೆಂಬ ಊರು ಯಾವರೀತಿಯಿದೆ, ಅದು ಯಾವ ದಿಕ್ಕಿನಲ್ಲಿದೆ, ಅದರ ಲಕ್ಷಣ, ಸ್ಥಿತಿ, ಇವುಗಳೆಲ್ಲಾ ತಿಳಿದ ಹೊರತು ಮೈಸೂರಿಗೆ ಹೋಗುವುದು ಹೇಗೆ? ಅದೇ ರೀತಿ ಸಮಾಜವಾದಿ ಸಮಾಜದ ಆಕಾರ—ಸ್ವರೂಪ—ಅವಸ್ಥಾ ತಿಳಿದಹೊರತು ನಾವದನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನೆಲ್ಲಾ ತಿಳಿಸಿದೆಯೆಂದು ಸರ್ಕಾರದವರು ಹೇಳಬಹುದು. ಆದರೆ what is given there is only the object. It is not the sign and symptoms, or the shape and form, ಆದ್ದರಿಂದ ಅದರ ಸ್ವರೂಪವನ್ನು ತಿಳಿಯಗೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

9 A.M.

ಹೀಗಿದ್ದರೂ ಕೂಡ, ಸರಕಾರದವರು ಎನ್ನುವಂಥ ಈ ಸಮಾಜವಾದಿ ಸಮಾಜ ರಚನೆಗಾಗಲೀ ಈ "ಪಂಚವಾರ್ಷಿಕ—ಯೋಜನೆಯ" ಯಶಸ್ಸಿಗಾಗಲಿ ಒಂದು ಮಹಾ ಪ್ರಧಾನ ಸಾಧನವಿದ್ದರೆ ಅದು—ದೇಶದೊಳಗಿನ ಪ್ರತಿಯೊಬ್ಬರ ಸಣ್ಣ ದೊಡ್ಡ ದೇಶಬಾಂಧವನೂ ತನ್ನ ಶಕ್ತಿಗನುಸಾರವಾಗಿ, ತನ್ನ ಜೀವನಕ್ಕೆ ಆವಶ್ಯಕವಿರುವಷ್ಟೇ ಸಂಪಾದಿಸಬೇಕು. ಅಥವಾ (ಇದು ಅಶಕ್ಯವಾದರೆ) ಶಕ್ಯವಿದ್ದಮಟ್ಟಿಗೆ ತನ್ನಲ್ಲಿಯ ಸ್ಥಾವರ—ಜಂಗಮ ಆಸ್ತಿ, (ಅಧಿಕಾರ—ಸಂಪತ್ತಿ)ಗಳ ತ್ಯಾಗ ಮಾಡುವುದು—ಇದು ಒಂದೇ ಉಪಾಯ.

Possible abandonment of one's own possessions, both movables and immovables.

ಇದನ್ನು ಶಕ್ಯವಿದ್ದಷ್ಟು ಎಲ್ಲರೂ ಆಚರಣೆಯಲ್ಲಿ ತರಬೇಕೆಂದು ಹೇಳಬಿಚ್ಛಿಸುತ್ತೇನೆ. ಇದರಿಂದ ಖಂಡಿತವಾಗಿ ಎಲ್ಲವೂ ಸಾಧ್ಯವಾಗಿ ದೇಶಕಲ್ಯಾಣವಾಗಬಹುದು.

*ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ಸ್ವಾಮಿ, ರಾಜ್ಯಪಾಲರ ಭಾಷಣಕ್ಕೆ ನಾನು ವಂದನೆಗಳನ್ನರ್ಪಿಸುತ್ತಾ ಸರ್ಕಾರದಲ್ಲಿ ನಡೆಯತಕ್ಕ ಕೆಲವು ಲೋಪದೋಷಗಳನ್ನು ಇಲ್ಲಿ ಹೇಳಿದರೆ ತಪ್ಪಾಗಲಾರದೆಂದು ತಿಳಿದುಕೊಂಡಿದ್ದೇನೆ. ಮೊದಲನೆಯದಾಗಿ, ವ್ಯವಸಾಯದ ಇಲಾಖೆಯನ್ನು ತೆಗೆದುಕೊಂಡರೆ, ನಮ್ಮ ದೇಶದಲ್ಲಿ ವ್ಯವಸಾಯ ಇಲಾಖೆಯು ಇದೆಯೋ ಇಲ್ಲವೋ ಎನ್ನುವಸ್ಥಿತಿಯಲ್ಲಿದೆ. ಏಕೆಂದರೆ ಯಾವೊಂದು ಸಮರ್ಪಕವಾದ ಕೆಲಸಕಾರ್ಯಗಳೂ ಯಶಸ್ವಿಯಾಗಿ ನಡೆಯುತ್ತಿಲ್ಲ. ಎರಡನೆಯದಾಗಿ ಅರಣ್ಯಶಾಖೆ ಮತ್ತು ಮೂರನೆಯದಾಗಿ ವೆಟರಿನರಿ ಇಲಾಖೆ ಇವುಗಳನ್ನು ತೆಗೆದುಕೊಳ್ಳೋಣ. ಈ ಇಲಾಖೆಗಳಿಂದ ರೈತನಿಗೇ

* Asterisks indicate that the remarks or speeches have not been revised by the Members concerned.

ನಾದರೂ ಅನುಕೂಲವಾಗುತ್ತಿದೆಯೋ ಅಥವಾ ಈ ಇಲಾಖೆಗಳಿಂದ ನಿಜವಾಗಿಯೂ ಸರ್ಕಾರದಲ್ಲಿ ಅಚ್ಚುಕಟ್ಟಾದ ಕೆಲಸಕಾರ್ಯಗಳು ಏನಾದರೂ ನಡೆಯುತ್ತಿವೆಯೋ ಎಂದರೆ ಏನೂ ಇಲ್ಲ, ಏಕೆಂದರೆ ವ್ಯವಸಾಯದ ಇಲಾಖೆಯವರು ಗೊಬ್ಬರವನ್ನು ಮಾರುತ್ತಿದ್ದರು. ಈಗ ಅದನ್ನು ತಪ್ಪಿಸಿದರು. ಈಗ ಅವರಿಗೆ ಬೇರೆ ಏನು ಕೆಲಸವಿದೆ? ಅರಣ್ಯ ಶಾಖೆಯವರು ಫಾರೆಸ್ಟನ್ನು ಹೆಚ್ಚಾಗಿ ಬೆಳೆಸುತ್ತಿದ್ದಾರೆಯೋ ಎಂದು ನೋಡಿದರೆ, ಅಲ್ಲಿ ಮರಗಳು ಬೆಳೆಯುವುದಕ್ಕೆ ಬದಲಾಗಿ ಬೇಲಿ ಹೆಚ್ಚಾಗಿ ಬೆಳೆದುಕೊಂಡಿದೆ. ಮೂರನೆಯದಾಗಿ ವೆಟರಿನರಿ ಇಲಾಖೆಯ ವಿಷಯವಾಗಿ ಹೇಳುವುದಾದರೆ, ಮೊದಲು ಈ ಇಲಾಖೆಯವರು ಪ್ರತಿಯೊಂದು ಕಡೆಗೂ ಹೋಗಿ ಕಾಯಿಲೆ ಎಲ್ಲಿದೆ, ಹೇಗೆ ಹರಡುತ್ತಿದೆ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದರು. ಈಗ ಆ ಇಲಾಖೆಯವರು ತುಮಕೂರು ಹೆಡ್‌ಕ್ವಾರ್ಟರ್ಸ್ ಒಂದನ್ನು ಬಿಟ್ಟು ಮತ್ತೆ ಹೊರಗಡೆಗೆ ಎಲ್ಲಿಯೂ ಹೋದಂತೆ ನನಗೆ ಕಾಣಲಿಲ್ಲ. ಈ ಮೂರು ಇಲಾಖೆಗಳ ಮೇಲೆ ಜನಗಳ ನಂಬಿಕೆ ಪೂರ್ತಿಯಾಗಿ ಹೋಗಿದೆ ಎಂದು ನಾನು ಹೇಳಿದರೆ ಅದೇನು ಅತಿಶಯೋಕ್ತಿಯಾಗಲಾರದು.

ಇನ್ನು ಲೋಕಲ್ ಸೆಲ್ಫ್ ಗೌರ್ನಮೆಂಟ್‌ಗೆ ಸಂಬಂಧಪಟ್ಟ ಪಂಚಾಯಿತಿ ಬೋರ್ಡುಗಳ ಚುನಾವಣೆಯ ವಿಷಯವನ್ನು ತೆಗೆದುಕೊಳ್ಳುವುದಾದರೆ, ಕೆಲವು ಕಡೆ ಪಂಚಾಯಿತಿ ಬೋರ್ಡುಗಳ ಚೇರ್ಮನ್ನರ ಚುನಾವಣೆ ಇನ್ನೂ ನಡೆಯಲೇ ಇಲ್ಲ. ಒಂದುವೇಳೆ ಹಾಗೆ ಚೇರ್ಮನ್ನರ ಚುನಾವಣೆ ನಡೆದಿದ್ದರೂ ಅನೇಕ ಕಡೆಗಳಲ್ಲಿ ಪಂಚಾಯಿತಿ ಬೋರ್ಡುಗಳ ಚಾರ್ಜನ್ನು ಹೊಸಬರಿಗೆ ಕೊಟ್ಟಿಲ್ಲ. ಆ ಹೆಸರುಗಳನ್ನು ಹೇಳಬೇಕಾದರೆ, ತಾವು ನನಗೆ ಇನ್ನೂ ಸ್ವಲ್ಪ ಹೆಚ್ಚಿನ ಅವಕಾಶವನ್ನು ಕೊಡುವುದಾದರೆ ಉದ್ದಕ್ಕೂ ಹೇಳುತ್ತೇನೆ. ಏಕೆಂದರೆ ಹಳಬರಿಗೆ ಈ ವಿಷಯಗೊತ್ತಿದೆ; ಬೇರೆ ಪ್ರಾಂತ್ಯಗಳಿಂದ ಬಂದಿರುವವರಿಗೆ ಸಾಮಾನ್ಯವಾಗಿ ಈ ವಿಷಯ ಅಷ್ಟಾಗಿ ತಿಳಿದಿರುವುದಿಲ್ಲ.

ಇನ್ನು ಲ್ಯಾಂಡ್ ಅಕ್ವಿಸಿಷನ್ ವಿಷಯವಾಗಿ ಹೇಳುವುದಾದರೆ, ರೈತನೇನಾದರೂ ಅರ್ಜಿಗಳನ್ನು ಹಾಕಿದರೆ, ಅದನ್ನು ರೆವಿನ್ಯೂ ಇನ್ಸ್‌ಪೆಕ್ಟರ್ ರಿಕಾರ್ಡು ಮಾಡಿದ ಮೇಲೆ ಹೆಲ್ತ್ ಡಿಪಾರ್ಟ್‌ಮೆಂಟಿನವರೂ ನೋಡಬೇಕು. ಅವರು ಅದನ್ನು ಸ್ಪಾಟ್ ಇನ್ಸ್‌ಪೆಕ್ಷನ್ನಿಗೆ ಇಟ್ಟುಕೊಂಡು ವರ್ಷಾನುಗಟ್ಟಲೆ ಆ ಕಾಗದವನ್ನು ಕೊಳೆ ಹಾಕುತ್ತಾರೆ. ಹೀಗಾಗಿ ಅಕ್ವಿಸಿಷನ್ ಒಂದು ಸರಿಯಾದ ರೀತಿಯಲ್ಲಿ ಆಗುತ್ತಾಇಲ್ಲ; ಅಕ್ವಿಸಿಷನ್ ಆಗುವ ಸಂದರ್ಭದಲ್ಲಿ ಅನೇಕ ಅಡ್ಡಿ ಆತಂಕಗಳು ಬರುತ್ತವೆ. ಒಂದು ಉದಾಹರಣೆಯನ್ನು ಹೇಳಬೇಕಾದರೆ ಒಂದು ಕಡೆ ತುಮಕೂರು ತಾಲ್ಲೂಕಿನಲ್ಲಿ ಹೆಣ ಹೂಳುವುದಕ್ಕೆ ಅಕ್ವೈರುಮಾಡಿಕೊಂಡ ಸ್ಥಳದಲ್ಲಿ ಅವಕಾಶ ಕೊಡದೆ ಇದ್ದುದರಿಂದ ಆಗ ಜಮೀನುದಾರರಿಗೂ ಮತ್ತು ಅಲ್ಲಿಯ ಜನರಿಗೂ ಘರ್ಷಣೆಯುಂಟಾಗಿ ಎಷ್ಟೋ ಹೆಣಗಳು ಉರುಳತಕ್ಕ ಪರಿಸ್ಥಿತಿ ಒದಗಿತ್ತು. ಆ ಅಕ್ವಿಸಿಷನ್ ಪ್ರಶ್ನೆ ಇನ್ನೂ ಬಗೆಹರಿದಿಲ್ಲ. ಹೀಗಾಗಿರುವುದರಿಂದ ನಮ್ಮದೇ ಸರ್ಕಾರವಿದ್ದರೂ ನಿಜವಾಗಿ ಸರ್ಕಾರ ಇದೆಯೋ ಇಲ್ಲವೇ ಎಂದು ಈಗ ಯೋಚನೆ ಮಾಡಬೇಕಾಗಿದೆ. ಇಷ್ಟು ಹೇಳಿದೆನೆಂದು ವಿರೋಧ ಪಕ್ಷದವರು ಹೆಮ್ಮೆ ಪಡಬೇಕಾಗಿದೆ. ಈಗ ನಮ್ಮ ಸರ್ಕಾರದವರು ಮಾಡುವ ಕೆಲಸ ಬೇಕಾದಷ್ಟು ಇದೆ.

ಈಗ ಆಂಟಿಕರಪ್ಷನ್ ಇಲಾಖೆಯಿಂದ ಆಗಾಗ್ಗೆ ಒಂದೊಂದು ರಿಪೋರ್ಟ್ ಬರುತ್ತಿದೆ. ಅದನ್ನು ನೋಡಿದರೆ ಅದರಲ್ಲಿ ಯಾವನೋ ಒಬ್ಬ ಗುಮಾಸ್ತನನ್ನು ಹಿಡಿದಿದ್ದು ಮತ್ತು ಒಬ್ಬ ಶ್ಯಾನುಭೋಗನನ್ನು ಹಿಡಿದಿದ್ದು ಇಂತಹ ಅಲ್ಪ ವಿಷಯ ಇರುತ್ತವೆಯೋ ಹೊರತು, ಹೆಚ್ಚು ಲಂಚ ಪಡೆಯುವ ದೊಡ್ಡ ದೊಡ್ಡ ಅಧಿಕಾರಿಗಳ ಹೆಸರುಗಳೇ ಇರುವುದಿಲ್ಲ. ಇದು ಎಷ್ಟು ಅನ್ಯಾಯ! ಹೆಚ್ಚು ಲಂಚವನ್ನು ತೆಗೆದುಕೊಳ್ಳುವವರ ತಂಟೆಗೆ ಹೋಗುವುದೇ ಇಲ್ಲ. ಏಕೆಂದರೆ ಅವರು ದೊಡ್ಡ ದೊಡ್ಡ ಅಧಿಕಾರಿಗಳ ಹಂಗಿನಲ್ಲಿರುತ್ತಾರೆ. ಯಾವಾಗಲೂ ಅವರ ಜೊತೆಯಲ್ಲಿಯೇ ಇರುತ್ತಾರೆ. ಇದರಿಂದಲೇ ಎಫಿಷಿಯನ್ಸಿ ಆಡಿಟ್ ಶಾಖೆಯ ಆಡಳಿತ ದಕ್ಷತೆಯಿಂದ ನಡೆಯುತ್ತಿಲ್ಲ ಎಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಈ ವಿಷಯದಲ್ಲಿ ಸರ್ಕಾರದವರು ಸೂಕ್ತವಾದ ವ್ಯವಸ್ಥೆಯನ್ನೇರ್ಪಡಿಸಬೇಕು.

ಇನ್ನು ಸಹಕಾರ ಚಳವಳಿಯ ವಿಷಯದಲ್ಲಿ ಹೇಳುವುದಾದರೆ, ಎಲ್ಲರೂ ಸಹಕಾರ ತತ್ತ್ವದ ಮೇಲೆ ನಡೆಯಬೇಕು. ಆದರೆ ಈ ಫೋರ್ಟ್‌ಫೋಲಿಯೋವನ್ನು ಮುಖ್ಯಮಂತ್ರಿಗಳು ತೆಗೆದುಕೊಂಡಿದ್ದರೂ ಬಹಳ ಜಾಗ್ರತೆಯಾಗಿ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯುತ್ತಾಇಲ್ಲ. ಹಿಂದೆ ರೈತರಿಗೆ ಸಹಕಾರ ಸೊಸೈಟಿಗಳ ಮೂಲಕ ಷಾರ್ಟ್‌ಟರ್ಮ್ ಲೋನ್ ಮತ್ತು ಮೀಡಿಯಂ ಟರ್ಮ್ ಲೋನ್‌ಕೊಡುತ್ತಿದ್ದರು. ಈಗ ರಿಜಿಸ್ಟ್ರೇಷನ್ ಫೀಸ್ ಕನ್ಸೆಷನ್ನನ್ನು ಮನ್ನಾ ಮಾಡಿದ ದೆಸೆಯಿಂದ, ಅಷ್ಟು ದುಡ್ಡು ನಿಂತು ಹೋಗಿದೆ. ಜನರ ಹತ್ತಿರ ದುಡ್ಡು ಇದ್ದರೆ, ಅವರು ಏಕೆ ಸಾಲತರಲು ಹೋಗಬೇಕು? ಅದರಿಂದ ರಿಜಿಸ್ಟ್ರೇಷನ್ ಫೀಸ್ ಕನ್ಸೆಷನ್ ಕೊಡುವುದನ್ನು ಕೂಡಲೇ ಮನ್ನಾ ಮಾಡಬೇಕು.

ಕಡೆಯದಾಗಿ ಆರೋಗ್ಯ ಇಲಾಖೆಯು ಎಲ್ಲಾ ಕಡೆಗಳಲ್ಲಿಯೂ ಇದೆಯೆಂದು ಮಂತ್ರಿಗಳು ಹೇಳಿದರು. ತುಮಕೂರು ಜಿಲ್ಲೆಯಲ್ಲಿ ಆರೋಗ್ಯ ಇಲಾಖೆ ಇದೆಯೋ ಇಲ್ಲವೋ ಎಂದು ನನಗೆನ್ನಿಸುತ್ತದೆ. ಏಕೆಂದರೆ ಸಿದ್ಧಗಂಗಾ ಕ್ಷೇತ್ರದಲ್ಲಿ ಇದ್ದಕ್ಕಿದ್ದ ಹಾಗೆ ಒಂದು ಸಾರಿ ಸ್ಪ್ರೇಮಾಡಿಸಬೇಕಾಗಿ ಬಂತು. ಪ್ರಿಕಾಷನರಿ ಮೆಜರ್ಸನ್ನು ಆರೋಗ್ಯ ಇಲಾಖೆಯವರು ತೆಗೆದುಕೊಳ್ಳಬೇಕೆಂದು ಕೇಳಿದರೂ ಇದುವರೆಗೂ ಯಾರೂ ಹೋಗಲಿಲ್ಲ. ಆಸ್ಪತ್ರೆ ಡಾಕ್ಟರ್ ಮಾತ್ರ ಹೋಗಿದ್ದಾರೆ. ಹೀಗೆಂದ ಮೇಲೆ ನಿಜವಾದ ಲೋಪವೆಲ್ಲದೆಯೆಂಬುದು ಈ ತಹಲ್‌ವರೆಗೂ ಗೊತ್ತಾಗಿಲ್ಲ. ಮುಖ್ಯವಾಗಿ ನಮ್ಮ ಸರ್ಕಾರದವರು ಹಳ್ಳಿಗಾಡಿನ ದೃಷ್ಟಿಯಿಂದ ನಮ್ಮ ತಾಲ್ಲೂಕಿನಲ್ಲಿ ಟಾರ್ ರಸ್ತೆ ಮತ್ತು ಲೈಟುಗಳನ್ನು ಜಾಗ್ರತೆಯಾಗಿ ಏರ್ಪಡಿಸಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳಿ ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತೇನೆ.

Sri V. P. DEENADAYALU NAIDU (Cubbonpet).—Mr. Speaker, Sir, notwithstanding all that has been said by the Opposition, I consider that there is nothing controversial in this Address. Unfortunately, the controversy was introduced in this House later on. Two very vital points emerge from this Address, namely, the socialistic pattern of society and the Second Five-Year Plan as its concomitant. My anxiety is this. The socialistic pattern of society is a conception which will have to be very guardedly introduced and practised. I would like to draw your very kind attention to the various addresses presented to the various State Legislatures

(SRI V. P. DEENADAYALU NAIDU).

and compare them with our Address from the point of view of advantages and disadvantages. We will have to consider this Address as a continuation of the previous Address to the august House. Otherwise, it would mean that the Address merely raises certain hopes and aspirations and noble ideas among the people without giving them an inkling as to how far we have succeeded in implementing our previous promises. It is to this aspect that I want to draw the attention of the Government and the Chair. Several promises were made in the previous Addresses. The present Address is silent as to how far we have been able to implement them. I feel that some reference should have been made to them in this Address. For instance, the water supply scheme for the Corporation area was placed before this House in the last Address of the Governor. The promise was that by July the scheme would completed and water supply increased. Unfortunately, there is no mention in the present Address as to the progress made so far with this scheme. Looking to the progress made in the scheme, it appears that we may not be able to fulfil our promise by July. I wish to draw the attention of the Government to this fact. Therefore, it is necessary that the Address should have given an idea as to the progress made and to what extent we have been able to fulfil our promises given in the drevious Addresses.

As regards the conception of socialistic pattern of society, if we want to succeed, this conception would have to be applied to our society in every sphere of its activities. I find that the socialistic pattern of society as construed in Bombay State is somewhat different from what is construed in the Mysore State. If we were to make such distinctions, perhaps the socialistic pattern of society will be somewhat different in different States. Therefore, there must be one uniform policy that has to be adopted. For instance, we have to see how far we have to remove the disparity between Government and the local self-governing bodies in the different States. These disparities will have to be uniformly eliminated throughout the different States.

SRI R. CHENNIGARAMAIAH.—What is the disparity?

SRI V. P. DEENADAYALU NAIDU.—The disparity is in relationship between the Government and the local self-governing institutions in the two States. The local self-governing institution in Bombay enjoys certain privileges which are not enjoyed by its counterpart in Mysore. For instance, the City Bus Service is run by the local self-governing institution in Bombay whereas it is a nationalised scheme here. Even according to the report of the Taxation Enquiry Commission this function has to go to the local self-governing institution. May I ask the Government as to what is happening in Mysore State in this regarde? The very idea of the last Ministry in taking over the bus service was to hand it over to the Corporation, but now we find that it is run by the Government. This is not what is happening in the Bombay State. There are certain disparities in the administration of laws even within Bangalore. These disparities are to be found between the City and Civil Area in Bangalore. If we are to adhere to the conception of socialistic pattern of society, our primary concern should be to remove all these disparities.

Then, Sir, there is one more fundamental thing which we have got to do. If we are to succeed in bringing about a socialistic pattern of society, we must make a thorough survey of the requirements of the population in every walk of life. Otherwise, whatever we do will not have a very wholesome effect on the people and that will be very detrimental to the very concept of socialistic pattern of society. At present we do not know what exactly is the requirement of a particular locality. Unless we make a proper survey of the requirements of the people and then work for it, the rich will become richer and the poor will become poorer and it may be that one who works has to work harder and one who is lazy will become lazier.

Then I want to focus the attention of Government to one more point. They must decide on the quantum of work each one has to do and see whether he

is doing that much work. If we decide on that and see that everybody does his quantum of work then I am sure we would have made a long march towards a socialistic pattern of society.

[Sri L. B. BIRJE (Khanapur) spoke in Marathi. His speech is printed in the Appendix number to this volume]

*ಡಾ|| ಕೆ. ನಾಗಪ್ಪ ಆಳ್ವ (ಹಂಪನಕಟ್ಟ).—ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಅನೇಕ ಭಾಷಣಗಳಾದುವು. ಆ ಭಾಷಣದಲ್ಲಿ ಅನೇಕ ಮಹತ್ವದ ವಿಚಾರಗಳು ಪ್ರಸ್ತಾಪಮಾಡಲ್ಪಟ್ಟಿವೆ. ಅದರ ಮೇಲೆ ಚರ್ಚೆಮಾಡಿ ವಿಚಾರ ವಿನಿಮಯಮಾಡಿ ರಚನಾತ್ಮಕ ಸಲಹೆಗಳನ್ನು ಕೊಡುವಂಥ ಒಂದು ಅವಕಾಶ ನಮಗೆ ದೊರೆತಿದೆ. ಅದಕ್ಕಾಗಿ ರಾಜ್ಯಪಾಲರನ್ನು ವಂದಿಸುವುದು ನಮ್ಮ ಕರ್ತವ್ಯ. ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಷಯಗಳೇನಿವೆ ಅವುಗಳನ್ನೆಲ್ಲ ಈಗ ಇಲ್ಲಿ ಪ್ರಸ್ತಾಪ ಮಾಡಲು ಸಾಧ್ಯವಿಲ್ಲ. ಆದುದರಿಂದ ಕೆಲವು ಸಲಹೆಗಳನ್ನು ಮಾತ್ರ ನಾನು ಹೇಳಬಯಸುತ್ತೇನೆ.

ಅಹಾರ ಸಮಸ್ಯೆಯ ವಿಚಾರದಲ್ಲಿ ಅನೇಕ ಫೇರ್ ಫ್ರೈಸ್ ಷಾಪ್ಸ್ ಮತ್ತು ಸರಬರಾಯಿ ಮಳಿಗೆಗಳನ್ನು ಪ್ರಾರಂಭಿಸಿದ್ದಾರೆ, ಅಲ್ಲದೆ ಹುಬ್ಬಳ್ಳಿ ಮತ್ತು ಮಂಗಳೂರುಗಳಲ್ಲಿ ಅಂಥ ಮಳಿಗೆಗಳನ್ನು ಪ್ರಾರಂಭಿಸುತ್ತೇವೆಂದು ವಾಗ್ದಾನಮಾಡಿದ್ದಾರೆ. ಆದರೆ ತಮ್ಮಲ್ಲಿ ನಾನು ಒತ್ತಿ ಕೇಳಿಕೊಳ್ಳುವುದೇನೆಂದರೆ ಹುಬ್ಬಳ್ಳಿಯಲ್ಲಿ ಮುಖ್ಯವಾಗಿ ಮಂಗಳೂರಿನಲ್ಲಿ ಸರಬರಾಯಿ ಆಗುವುದು ಅಗತ್ಯವಿದೆ. ಬರುವ ಮೂರು ತಿಂಗಳು. ಕಠಿಣ ಮಳೆಗಾಲ, ನಮಗೆ ಕಲ್ಲಿಕೋಟೆ ರೈಲ್ವೆ ಮಾರ್ಗದಲ್ಲಿ ಆಹಾರ ಬರುವುದಿದೆ. ಆದ್ದರಿಂದ ಕಡ್ಡಾಯವಾಗಿ ಈ ವಿಷಯದಲ್ಲಿ ಜಾಗ್ರತೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಸರ್ಕಾರಿ ನೌಕರರ ಸಂಬಳ ಏಕರೂಪದಲ್ಲಿರಬೇಕೆಂಬುದು ತುಂಬಾ ಸಂತೋಷದ ವಿಚಾರ. ಆದರೆ ನಮ್ಮ ಜಿಲ್ಲೆಯ ವಿಷಯನಾಗಿ ನಾನು ಹೇಳುವುದಾದರೆ ಅಲ್ಲಿ ಉಪಾಧ್ಯಾಯರಿಗೆ ಇತರ ಕಡೆಗಳಲ್ಲಿರುವಷ್ಟು ಅನುಕೂಲವಿಲ್ಲ. ಅದರಿಂದ ಅವರಲ್ಲಿ ಅಶಾಂತಿ ಮೂಡಿದೆ. ನಮ್ಮಲ್ಲಿ ನೂರರಲ್ಲಿ ತೊಂಬತ್ತು ಶಾಲೆಗಳು ಲೋಕಲ್ ಬೋರ್ಡಿಗೆ ಸೇರಿದುವು ಅಥವಾ ಏಡೆಡ್ ಶಾಲೆಗಳಾಗಿವೆ. ಸರ್ಕಾರಿ ನೌಕರರಿಗೆ ದೊರೆತಿರುವ ಗ್ರೇಡುಗಳು ನಮ್ಮ ಕಡೆಯ ಏಡೆಡ್ ಶಾಲೆ ಮತ್ತು ಲೋಕಲ್ ಬೋರ್ಡ್ ಶಾಲೆ ಉಪಾಧ್ಯಾಯರಿಗೆ ಸಿಕ್ಕುವುದಿಲ್ಲವೆಂಬ ಸಂಶಯವಿದೆ. ಆದ್ದರಿಂದ ನಮ್ಮ ಜಿಲ್ಲೆಯ ಉಪಾಧ್ಯಾಯರುಗಳಲ್ಲೂ ಜನತೆಯಲ್ಲೂ ತುಂಬ ಅಸಮಾಧಾನವುಂಟಾಗುವ ಪರಿಸ್ಥಿತಿ ಇರುವುದು. ಈ ವಿಷಯದಲ್ಲಿ ಸರ್ಕಾರದವರು ಗಮನ ತೆಗೆದುಕೊಂಡು ಅವರಿಗೆ ನ್ಯಾಯ ದೊರಕುವಂತೆ ಮಾಡಬೇಕಾಗಿ ನಾನು ಕೇಳಿಕೊಳ್ಳುತ್ತೇನೆ.

9-30 A.M.

ಆಯುರ್ವೇದ ಕಾಲೇಜಿಗೆ ಅನುಕೂಲವಾಗುವಂತೆ ಆಯುರ್ವೇದ ಆಸ್ಪತ್ರೆಯಲ್ಲಿನ Bed Strengthನ್ನು 36 ರಿಂದ 100ಕ್ಕೆ ಏರಿಸುವ ಆಲೋಚನೆಯಿದೆಯೆಂದು ಹೇಳಿದ್ದಾರೆ. ಇಲ್ಲಿನ ವಿದ್ಯಾಮಟ್ಟ ಅಷ್ಟೇನೂ ಹೆಚ್ಚಿಲ್ಲ. ವಿದ್ಯಾಮಟ್ಟವೂ ಹೆಚ್ಚುವುದರಕಡೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಚಾರ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಅನೇಕ ವರ್ಷಗಳಿಂದ ಮದ್ರಾಸ್ ಪ್ರಾಂತ್ಯದಲ್ಲಿ ಸೇರಿದ್ದಾಗಿದ್ದು ಅಲ್ಲಿನ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾ ವ್ಯಾಸಂಗ ನಡೆಸಲು ನಮ್ಮ ವಿದ್ಯಾರ್ಥಿಗಳಿಗೆ ಎಂದಿನಂತೆ ಇನ್ನು ಕೆಲವು ವರ್ಷಗಳಮಟ್ಟಿಗಾದರೂ ಸ್ಥಳಾವಕಾಶ ಸಿಕ್ಕುವಂತೆ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ನಮ್ಮ ಮಂಗಳೂರು ಬಂದರನ್ನು ಒಳ್ಳೆಯ ಬಂದರಾಗಿ ಮಾರ್ಪಡಿಸಿ ಅದರ ಕೆಲಸ ಶೀಘ್ರವಾಗಿ ನಡೆಯುವಂತೆ ಮಾಡಬೇಕು. ನಮ್ಮ ಕಡೆ ಮೀನು ಕೈಗಾರಿಕೆ ಒಂದು ಮುಖ್ಯವಾದ ಕೈಗಾರಿಕೆ. ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಹೆಚ್ಚಿನ ಕೆಲಸವನ್ನು ಕೈಕೊಳ್ಳುವ ಆಕಾಂಕ್ಷೆಯುಳ್ಳವರಾಗಿದ್ದಾರೆಂದು ಗೊತ್ತಾಗಿದೆ. ಮಲ್ಪೆಯಲ್ಲಿ ಒಂದು ಬಂದರನ್ನು ಮಾಡುವುದನ್ನು ಆಲೋಚಿಸಿರುವಂತೆ, ಈ ಕರಾವಳಿ ಪ್ರಾಂತ್ಯದಲ್ಲಿ ಇನ್ನೂ ಒಂದೆರಡು ಬಂದರುಗಳನ್ನು ಏರ್ಪಡಿಸುವ ವ್ಯವಸ್ಥೆಮಾಡಿದರೆ ಮೀನು ಕೈಗಾರಿಕೆಗೆ ಹೆಚ್ಚಿನ ಅನುಕೂಲವಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಇಂಟರ್ ಸ್ಟೇಟ್ ಸೀನಿಯಾರಿಟಿ ಪಟ್ಟಿಯನ್ನು ತಯಾರಿಸುವುದರಲ್ಲಿ ಯಾರಿಗೂ ಅನ್ಯಾಯವಾಗದಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ರಸ್ತೆ ಸಾರಿಗೆಗಳ ವಿಚಾರದಲ್ಲಿ ಒಂದು ಮಾತು. ರಸ್ತೆ ಮತ್ತು ಇತರ ಸಂಚಾರ ಸೌಕರ್ಯಗಳು ದೇಶದ ಅಭ್ಯುದಯದ ದೃಷ್ಟಿಯಿಂದ ಅತ್ಯಂತ ಮುಖ್ಯವಾದುವುಗಳೆಂಬುದನ್ನು ಹೇಳಬೇಕಾದ್ದಿಲ್ಲ. ಹೀಗಿರುವಾಗ ಈ ಭಾಷಣದಲ್ಲಿ ನಮ್ಮ ಭಾಗಕ್ಕೆ ಬಹಳ ಮಹತ್ವದ್ದಾಗಿರುವ ಹಾಸನ-ಮಂಗಳೂರು ರೈಲ್ವೆಯ ವಿಚಾರವನ್ನೇ ಪ್ರಸ್ತಾಪ ಮಾಡದಿರುವುದು ವಿಷಾದಕರ. ಮಲೆನಾಡಿನ ಅಭಿವೃದ್ಧಿಯ ದೃಷ್ಟಿಯಿಂದಲೇ ಅಲ್ಲದೆ ಇಡಿಯ ಕರ್ಣಾಟಕದ ಸರ್ವತೋಮುಖವಾದ ಬೆಳವಣಿಗೆಯಾಗಬೇಕಾದರೆ ಮಂಗಳೂರು-ಹಾಸನ ರೈಲ್ವೆಯ ಏರ್ಪಾಡು ಜೀವನಾಡಿಯಂತಿದೆ. ನಮ್ಮ ಎರಡನೆಯ ಪಂಚವಾರ್ಷಿಕ ಯೋಜನೆಯು ಹೇಗೂ elastic plan ಆಗಿರುವುದರಿಂದ ಕೇಂದ್ರ ಸರ್ಕಾರದವರ ಮೇಲೆ ನಮ್ಮ ಸರ್ಕಾರದವರು ಆದಷ್ಟು ಪ್ರಭಾವ ಬೀರಿ ಎರಡನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗಾದರೂ ಈ ರೈಲ್ವೆಯನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಭೂ-ಸುಧಾರಣೆಯ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳಲು ಇಷ್ಟಪಡುವುದಿಲ್ಲ. ಆದಷ್ಟು ಜಾಗ್ರತೆ ಕಾನೂನು ರೂಪದಲ್ಲಿ ಸರ್ವಸಾಮಾನ್ಯವಾದ ಒಂದು ಕಾನೂನನ್ನು ತರುವುದು ಅಗತ್ಯವಾಗಿದೆ. ಇದರಲ್ಲಿ ಒಂದು ವಿಷಯವನ್ನು ತಾವು ಮುಖ್ಯವಾಗಿ ಗಮನದಲ್ಲಿಡಬೇಕು. ತಾವು ಯಾವುದೇ ಭೂ-ಸುಧಾರಣಾ ಮಸೂದೆಯನ್ನು ತಂದರೂ ರೈತರ ಜೀವನದ ಮಟ್ಟವನ್ನು ಏರಿಸಲು ಅದು ಸಾಧಕವಾಗದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಸಹಕಾರ ಸಂಘಗಳ ಸಹಾಯ ರೈತರಿಗೆ ಹೆಚ್ಚು ಹೆಚ್ಚಾಗಿ ಲಭಿಸುವಂತೆ ಮಾಡಬೇಕು. ಜೊತೆಗೆ ಪ್ರತಿಯೊಬ್ಬ ರೈತರಿಗೂ ಯಾವುದಾದರೊಂದು ಪುಡಿ ಕೈಗಾರಿಕೆ ಬರುವಂತೆ ಮಾಡಬೇಕೆಂದು ಹೇಳಿ, ನನಗೆ ಈ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

*ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರು ಈ ಹೊತ್ತಿಗೆ ನಾಲ್ಕು ದಿವಸಗಳ ಹಿಂದೆ ದಯಪಾಲಿಸಿದ ಭಾಷಣದ ಸಂಬಂಧದಲ್ಲಿ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ರಾಜ್ಯಪಾಲರು ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದು ನಮ್ಮ ಮುಖ್ಯ ಕರ್ತವ್ಯ, ಇದಕ್ಕಾಗಿ ನಾವುಗಳೆಲ್ಲರೂ ಶಕ್ತಿಮೀರಿ ತ್ಯಾಗಮಾಡಿ ದುಡಿಯಬೇಕೆಂದು ಅಪ್ಪಣೆ ಕೊಡಿಸಿದ್ದಾರೆ. ಅವರ ಸಲಹೆ ಬಹಳ ಸೂಕ್ತವಾಗಿದೆ ಮತ್ತು ಅಮೂಲ್ಯವಾದದ್ದು. ಅವರಿಂದ ಇಂಥ ಮಾತುಗಳು ಬರತಕ್ಕದ್ದು ಸಹಜವೇ ಆಗಿದೆ. ಆದರೆ ಈ ಯೋಜನೆಯನ್ನು ಕಾರ್ಯಗತ ಮಾಡುವ ರೀತಿಯಲ್ಲಿ ಕೆಲವು ನ್ಯೂನತೆಗಳಿವೆಯೆಂಬುದನ್ನು ಮಾತ್ರ ನಾನು ಬಹಳ ವಿಷಾದದಿಂದಲೇ ಹೇಳಬೇಕಾಗಿದೆ. ಏಕೆಂದರೆ ಈ ಸರ್ಕಾರ ಯಾವ ಕೆಲಸ ಮಾಡಬೇಕಾದರೂ ಮೊದಲೊಂದು ಯೋಜನೆ ಹಾಕಿಬಿಡುವುದು, ಅದರಂತೆ ಕಾರ್ಯಕ್ರಮ ಗೊತ್ತುಮಾಡಿಕೊಂಡು ಕೆಲಸವನ್ನು execute ಮಾಡುವುದೇನೋ ನಡೆಯುತ್ತದೆ. ಇವೆಲ್ಲಾ ಸಾಂಗವಾಗಿ ನೆರವೇರುತ್ತವೆ. ಆದರೆ ಕೆಲಸ ಮುಗಿಸಿದ ಮೇಲೆ ಮುಂದೆ ಅದನ್ನು ನೋಡಿಕೊಳ್ಳುವುದಕ್ಕೆ ಅಥವಾ ಮುಂದುವರಿಸುವುದಕ್ಕೆ ಒಂದು continuous ವ್ಯವಸ್ಥೆ ಇರಬೇಕು. ಅದನ್ನು ಮಾಡದೆ ಇದ್ದರೆ ನೀವು ಮಾಡಿದ ಕೆಲಸವೆಲ್ಲಾ ಏನೂ ಪ್ರಯೋಜನವಿಲ್ಲದ ಹಾಗಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, N.E.S. ಬ್ಲಾಕ್‌ಗಳೆಂದು ಏರ್ಪಡಿಸಿ, ಆ ಯೋಜನೆಯ ಮುಖಾಂತರ ಅನೇಕ ರಸ್ತೆಗಳ ನಿರ್ಮಾಣವಾಯಿತು. ಆದರೆ ಈಗ ಅವುಗಳನ್ನು ನೋಡಿಕೊಳ್ಳುವವರೇ ಇಲ್ಲದೆ ನೀವು ಹಾಕಿದ ಹಣ ನಿಜವಾಗಿಯೂ ಪೋಲಾದಂತಾಗಿದೆಯೆಂದು ಮನನೊಂದು ಹೇಳುತ್ತಿದ್ದೇನೆ. ಲಕ್ಷಾಂತರ ರೂಪಾಯಿಗಳ ಖರ್ಚುಮಾಡಿ ಮಾಡಿದ ರಸ್ತೆಗಳು ಇಂದು ಮನುಷ್ಯ ಮಾತ್ರದವರು ಓಡಾಡುವುದಕ್ಕೆ ಕೂಡ ಆಗದ ಸ್ಥಿತಿಗೆ ಬಂದಿವೆಯಲ್ಲ ; ಈ ದುರಸ್ತಿಯ ವಿಚಾರ ಯಾರಿಗೆ ಬಿಟ್ಟಿದ್ದು ? ಯಾವ ಇಲಾಖೆ ಮಾಡಬೇಕೋ ಗೊತ್ತಿಲ್ಲ. ಯಾರನ್ನು ಕೇಳಿದರೂ ಜವಾಬ್ದಾರಿ ವಹಿಸಿಕೊಳ್ಳುತ್ತಿಲ್ಲ. ಸರ್ಕಾರದವರು ಯೋಜನೆಗಳನ್ನು ಮೊದಲು ಮಾಡುವಾಗಲೇ ಅದನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಕೂಡ ಒಂದು ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಪಾನ ನಿರೋಧದ ವಿಚಾರ. ಇದು ಎಲ್ಲರಿಗೂ ತಿಳಿದಿರುವ ವಿಚಾರ. ಇದರ ವಿಚಾರದಲ್ಲಿ ಎಷ್ಟೋ ಪರ್ಯಾಲೋಚನೆ ನಡೆದಿದೆ. ಆದ್ದರಿಂದ ಯಾವ ಮುಚ್ಚುಮರೆಯೂ ಇಲ್ಲದೆ ಹೇಳಬಹುದಾಗಿದೆ. ಭಾರತೀಯರಾದ ನಾವು ಸಾಮಾನ್ಯವಾಗಿ sentimentಗಳಿಗೆ ಬೆಲೆ ಕೊಡುತ್ತೇವೆ. ಒಂದು sentiment ಗೆ ಕಟ್ಟುಬಿದ್ದು ಪಾನ ನಿರೋಧವನ್ನು ಇಷ್ಟು ದಿವಸಗಳವರೆಗೂ ಮುಂದುವರಿಸುತ್ತಾ ಬಂದಿದ್ದೇವೆಂದು ಹೇಳಬೇಕು ಅಷ್ಟೆ. ಮಹಾತ್ಮಾ ಗಾಂಧಿಯವರು ಪಾನ ನಿರೋಧವನ್ನು ಜಾರಿಗೆ ತಂದೇ ತರಬೇಕೆಂದು ಹೇಳುತ್ತಿದ್ದುದರಲ್ಲಿ ಅಷ್ಟೊಂದು ಅರ್ಥವಿರಲಿಲ್ಲವೆಂದು ಹೇಳಬಹುದು. ಹಾಗೊಂದು ವೇಳೆ ಪಾನ ನಿರೋಧದಿಂದ ವರಮಾನ ಬರುವುದು ಸ್ವಲ್ಪವೂ ಬೇಡವೆಂದು ತಮ್ಮ ಅಭಿಪ್ರಾಯವಾಗಿದ್ದರೆ, ಏನೇ ಕಷ್ಟ ಬರಲಿ, ಕೇಂದ್ರದವರೂ, ಸಂಸ್ಥಾನಗಳವರೂ ಒಂದು common policy ಹಾಕಿಕೊಂಡು ಎಲ್ಲ ಸ್ಥಳಗಳಲ್ಲೂ ಏಕಕಾಲದಲ್ಲಿ ಜಾರಿಗೆ ತಂದರೆ, sentiment ಗಾದರೂ ಸಂಪೂರ್ಣವಾಗಿ ಬೆಲೆ ಕೊಟ್ಟ ಹಾಗಾಗುತ್ತದೆ. ಹಾಗಿಲ್ಲದೆ ಒಂದು ಕಡೆ ಜಾರಿಗೆ ತರುವುದು, ಇದು ಮೈಲಿಯಾಚೆ ಸುಮ್ಮನೆ ಬಿಡುವುದು ಸರಿಯಲ್ಲ. ಅದರಿಂದ ನಿಮ್ಮ ಉದ್ದೇಶ ಎಷ್ಟು ಮಾತ್ರವೂ ಸಫಲವಾಗುವುದಿಲ್ಲ.

ಕೊನೆಯದಾಗಿ ಆಹಾರದ ವಿಚಾರ. ಇದು ಬಹಳ ಮುಖ್ಯವಾದ ವಿಷಯ. ಆಹಾರದ ಬೆಲೆಯ ಮೇಲೆ ಮಿಕ್ಕೆಲ್ಲ ವಸ್ತುಗಳ ಧಾರಣೆಗಳೂ ಆಧಾರವಾಗಿರುತ್ತವೆ ಬುದು ಎಲ್ಲರಿಗೂ ಗೊತ್ತಿದೆ. ಈಗಂತೂ ಆಹಾರದ ಧಾರಣೆ ಮಿತಿಮೀರಿ ಏರುತ್ತಿದೆ. ಅದನ್ನು ಇಳಿಸುವುದು ಮಾತ್ರವೇ ಅಲ್ಲದೆ, ಈ ಧಾರಣೆಗಳು stabilise ಆಗುವಂತೆ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳುವುದು ಅತಿ ಜರೂರಾಗಿದೆಯೆಂದು ನಾನು ಹೇಳಬಯಸುತ್ತೇನೆ. ಹೀಗೆ ಮಾಡುವುದರಿಂದ ಆಹಾರದ ಬೆಲೆಗಳು ಒಂದು ಸ್ತಿಮಿತ ರೀತಿಯಲ್ಲಿದ್ದು ಆಹಾರ ಸಾಮಗ್ರಿಗಳು ಎಲ್ಲರಿಗೂ ಸಿಕ್ಕುವಂತಾಗುತ್ತದೆಂದು ಹೇಳುತ್ತೇನೆ. ರೈತರ ದೃಷ್ಟಿಯಿಂದ ಇದು ಬಹಳ ಮುಖ್ಯ. ಏಕೆಂದರೆ ರೈತರು ತಮ್ಮ ಆಹಾರ ಧಾನ್ಯಗಳನ್ನು ಮಾರುವುದರ ಮೂಲಕವೇ ಇತರ ವ್ಯವಸಾಯೋಪಕರಣಗಳನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯ. ಸ್ಥಿರವಾದ ರೀತಿಯಲ್ಲಿ ಧಾರಣೆಗಳಿಲ್ಲದಿದ್ದರೆ, ಅತನು ತನ್ನ ಖರ್ಚು ವೆಚ್ಚಗಳನ್ನು ಸರಿದೂಗಿಸಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಈ ಕಷ್ಟ ನಿವಾರಣೆಗೆ ಸೂಕ್ತ ಕಾರ್ಯಕ್ರಮ ಹಾಕಿಕೊಂಡು ಧಾರಣೆವಾಸಿಗಳು ಇಳಿಯುವಂತೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ಕುರಿತು ನಾನು ಒಂದೆರಡು ಸಣ್ಣ ಸಣ್ಣ ಸೂಚನೆಗಳನ್ನು ಸೂಚಿಸುವುದರೊಂದಿಗೆ ಅದನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಇಲ್ಲಿ ನಮ್ಮ ಪ್ರತಿಪಕ್ಷದ ಸ್ನೇಹಿತರು ಈ ಭಾಷಣವು ಸಾಂಪ್ರದಾಯಿಕವಾಗಿಯೂ, ಪ್ರಗತಿಪರವಿಲ್ಲದೆಯೂ ಇದೆಯೆಂದು ಹೇಳಿದರು. ಆದರೆ ನನ್ನ ಮನಸ್ಸಿಗೆ ರಾಜ್ಯಪಾಲರ ಭಾಷಣವು ಸಮರ್ಪಕವಾಗಿದೆಯೆಂದು ತೋರುತ್ತದೆ. ಈಗಾಗಲೇ ನಾವು ಗುಂಪುಗಳಿಂದ ಕೂಡಿದ ಮತ್ತು ನಾನಾ ವೈವಿಧ್ಯತೆಯಿಂದ ಕೂಡಿದ ಐದು ಪ್ರದೇಶಗಳಿಂದ ಬಂದವರಿದ್ದೇವೆ. ಇಂತಹ ಸಂದರ್ಭದಲ್ಲಿ ಒಂದೇ ಸಲ ಪ್ರಗತಿಪರ, ಪ್ರಗತಿಪರ ಎಂಬ ಮಾತಿಗೆ ಮರುಳಾಗಿ ಯೋಜನೆಗಳನ್ನು ಮಾಡಿದರೆ ಪುಸ್ತಕದ ಬದನೇಕಾಯಿ ಆದೀತಲ್ಲದೆ ಅವು ಸಂಪೂರ್ಣವಾಗಿ ಕಾರ್ಯಗತಕ್ಕೆ ಬರಲಾರವು. ನಮ್ಮ ಮಾನ ಪ್ರತಿಪಕ್ಷದ ವರ್ಗದವರು ಮದ್ಯಪಾನ ನಿರೋಧದ ವಿಷಯದಲ್ಲಿ ವಿಶೇಷವಾಗಿ ಟೀಕಿಸಿದರು. ಅವರ ಟೀಕೆಗಳಿಗೆ ನಾನು ಮನ್ನಣೆ ಕೊಡುವುದಿಲ್ಲ. ಅವರು ಮದ್ಯಪಾನ ನಿರೋಧದಿಂದಾಗುವ ಬಾಧಕಗಳನ್ನು ತಿಳಿದುಕೊಂಡಿದ್ದಾರೆ, ಆದರೆ ಅದರಿಂದಾಗಿರುವ ಸಾಧಕಗಳನ್ನು ತಿಳಿದುಕೊಂಡಿಲ್ಲವೆಂದು ವ್ಯಥೆಯಿಂದ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಮದ್ಯಪಾನ ನಿರೋಧ ಚಳವಳಿ ಪ್ರಾರಂಭವಾಗಿ ಈಗ್ಗೆ ಹತ್ತು ವರ್ಷಗಳಿಂದ ಏನಾದರೂ ಪ್ರಯೋಜನವಾಗಿದೆಯೋ ಇಲ್ಲವೇ ಎಂಬುದನ್ನು ಕೂಲಂಕಷವಾಗಿ ನಾವು ವಿಚಾರಮಾಡಿದರೆ, ಖಂಡಿತವಾಗಿ ಪ್ರಯೋಜನವಾಗಿದೆ ಎಂದು ನಾನು ಹೇಳುತ್ತೇನೆ. ಏಕೆಂದರೆ ಈ ದೇಶದ ಪ್ರಜೆಗಳಲ್ಲಿ ಸಾಮಾನ್ಯವಾಗಿ ಒಡವರೇ ಜಾಸ್ತಿ, ಕೂಲಿಗಾರರು ಜಾಸ್ತಿ. ಅವರು ಕುಡಿದು ಮನುಷ್ಯ ಜಾತಿಗಿಂತಲೂ ಹೀನಮಟ್ಟಕ್ಕೆ ಹೋಗಿದ್ದವರು ಈಗ ಒಂದಿಷ್ಟು ಚೇತರಿಸಿಕೊಂಡು "ನಾವು ದೇಶದ ಪ್ರಜೆ

ಗಳು, ಈ ರೀತಿ ಹೋಗಿ ಮದ್ಯಪಾನವನ್ನು ಸೇವಿಸಬಾರದು, ನಾವೂ ಸಹ ನಮ್ಮ ಅಕ್ಕಪಕ್ಕದವರಂತೆ ಸುಧಾರಿಸಿ ಬರಬೇಕು'' ಎಂದು ಈ ಮದ್ಯಪಾನ ನಿರೋಧದಿಂದ ಅವರ ಮನಸ್ಸಿನಲ್ಲಿ ಒಂದು ಜಾಗೃತಿ ಉಂಟುಮಾಡಿದೆ. ಒಂದು ಯೋಜನೆ ಮಾಡಲು ಸರ್ಕಾರ ಹಣ ಕೊಟ್ಟರೆ ಅದು ಖರ್ಚಾಗಬಹುದು ; ಅದರಿಂದ ಅಷ್ಟು ಅನುಕೂಲವಾಗುವುದಿಲ್ಲ. ಆದರೆ ಮದ್ಯಪಾನ ನಿರೋಧವನ್ನು ಸಂಸ್ಥಾನಾದ್ಯಂತ ಜಾರಿಗೆ ತಂದರೆ, ಕುಡಿಯುವವರ ಬಾಳ್ವೆಯನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಪ್ರಯೋಜನವಾಗುತ್ತದೆ. ಪ್ರತಿಪಕ್ಷದವರು ಹೇಳಿದಂತೆ ಮದ್ಯಪಾನ ನಿರೋಧ ಸಂಪೂರ್ಣವಾಗಿ ಪ್ರಯೋಜನಕರವಾಗಿಲ್ಲ ಮತ್ತು ಎಲ್ಲಾ ಕಡೆಗಳಲ್ಲೂ ಜಾರಿ ಮಾಡಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಸಂಸ್ಥಾನಾದ್ಯಂತ ಮದ್ಯಪಾನ ನಿರೋಧವನ್ನು ಜಾರಿಮಾಡಿದ ಮಾತ್ರದಿಂದಲೇ ಪ್ರಯೋಜನವಾಗುತ್ತದೆ, ನಿಜ. ಆದರೆ ಇದಕ್ಕೆ ಯಾರಿಂದೆಲ್ಲ ತೊಂದರೆಯಾಗಿದೆಯೆಂಬುದನ್ನು ಮಾತ್ರ ತಿಳಿದುಕೊಳ್ಳಬೇಕು. ಸಾಧಾರಣವಾಗಿ ಈಗ ಕುಡಿಯುವವರು ಬಡವರು ಎಂದು ಹೇಳುತ್ತಾರೆ. ನಿಜವಾಗಿ ಬಡವರು ಕುಡಿಯುವುದಿಲ್ಲ. ಯಾರ ಕೈಯಲ್ಲಿ ದುಡ್ಡು ಉಂಟೋ ಅವರು ದುಂದುವೆಚ್ಚಮಾಡುತ್ತಾರೆ. ಅವರು ವಿಶೇಷವಾಗಿ ಕುಡಿಯುವುದಕ್ಕೆ ಹೋಗುತ್ತಾರೆ. ಯಾವ ಮನುಷ್ಯನು ಉನ್ನತಮಟ್ಟಕ್ಕೆ ಬರಬೇಕೆಂದು ಇಚ್ಛಿಸುತ್ತಾನೋ ಅವನು ಕುಡಿಯುವುದಿಲ್ಲ ಮತ್ತು ಹಾಳಾಗುವುದಿಲ್ಲ. ಅಂಥವನಿಗೆ ಈ ಮದ್ಯಪಾನ ನಿರೋಧದಿಂದ ಸಾಧಕುವಾಗಿದೆಯೆಂದು ಹೇಳುತ್ತೇನೆ.

ಇನ್ನು ಭೂ ಸುಧಾರಣೆಯ ವಿಚಾರದಲ್ಲಿ ಕೆಲವರ ಒಂದೆರಡು ಸಲಹೆಗಳನ್ನು ತಿಳಿಸಿದರು. ಭೂ ಸುಧಾರಣೆಯ ಸಮಿತಿಯವರು ಬೆಂಗಳೂರಿನಲ್ಲಿಯೇ ಕುಳಿತು ತಮ್ಮ ಕೆಲಸವನ್ನು ನಿರ್ವಹಿಸುವುದಕ್ಕಾಗುವುದಿಲ್ಲ. ಜಿಲ್ಲೆ ಜಿಲ್ಲೆಗಳಿಗೂ ಹೋಗಬೇಕು. ಅವರು ತಂಡ ತಂಡವಾಗಿ ಮುಖ್ಯ ಮುಖ್ಯ ನಗರಗಳಿಗೆ ಹೋಗಿ ಕೇವಲ ಹತ್ತು ಭೂಮಾಲೀಕರನ್ನು ಕರೆದು ವಿಚಾರಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಅದಕ್ಕೆ ಬದಲಾಗಿ ಅಕಸ್ಮಾತ್ತಾಗಿ ಪಟ್ಟಣದಿಂದ ಮೂರು ನಾಲ್ಕು ಮೈಲಿಗಳ ದೂರದಲ್ಲಿರುವ ಹಳ್ಳಿಗಳಿಗೆ ಭೇಟಿಕೊಟ್ಟರೆ, ಆಗ ಅಲ್ಲಿನ ಒಕ್ಕಲುಗಳ ಸ್ಥಿತಿಗತಿಗಳ ಬಗ್ಗೆ ಚೆನ್ನಾಗಿ ಸಾಕ್ಷ್ಯಗಳನ್ನು ತಿಳಿದುಕೊಳ್ಳಬಹುದು. ಈರೀತಿ ಹಳ್ಳಿಗಳಿಗೆ ಹೋಗಿ ಹಳ್ಳಿಗಳ ನಿಜವಾದ ಸ್ಥಿತಿಗಳನ್ನು ತಿಳಿಯುವುದಕ್ಕೆ ಸರ್ಕಾರದವರು ಸೂಕ್ತ ವ್ಯವಸ್ಥೆಯನ್ನು ಮಾಡಬೇಕು. ಒಂದು ಸಾರಿ ನಮ್ಮ ವ್ಯವಸಾಯದ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದರು. ನನಗೆ ಬಹಳ ಸಂತೋಷವಾಯಿತು. ನಾನೂ ಅವರ ಜೊತೆಗೆ ಹೋಗಿದ್ದೆ. ಅವರು ಕೆಲವುಕಡೆ ಧನಿಕರನ್ನೂ, ಭೂಮಾಲೀಕರನ್ನೂ ಕರೆದು ಅವರಿಂದ ಹಳ್ಳಿಯ ರೈತರ ಸ್ಥಿತಿಗತಿಗಳನ್ನೂ ತಿಳಿದುಕೊಂಡಿದ್ದೂ ಅಲ್ಲದೆ ಕೆಲವು ಕಡೆಗಳಲ್ಲಿ ತಮ್ಮ ಕಾರನ್ನು ನಿಲ್ಲಿಸಿ ಹಳ್ಳಿಗಳ ನಿಜವಾದ ಸ್ಥಿತಿಯನ್ನು ರೈತರಿಂದಲೇ ತಿಳಿಯುವುದಕ್ಕೆ ಪ್ರಯತ್ನಪಟ್ಟರು. ಆದರೆ ಒಂದು ವಿಚಾರ ಅವರಿಗೆ ತಿಳಿದಿಲ್ಲವೆಂದು ಕಾಣುತ್ತದೆ. ನಮ್ಮಲ್ಲಿ ರೈತರು ಏನು ಮಾಡುತ್ತಾರೆಂದರೆ ಯಾರಾದರೂ ಮಂತ್ರಿಗಳೇ ಆಗಲಿ, ದೊಡ್ಡ ಅಧಿಕಾರಿಗಳೇ ಆಗಲಿ ಹಳ್ಳಿಗಳಿಗೆ ಭೇಟಿಕೊಟ್ಟರೆ, ಅವರು ಏನಾದರೂ ಹಳ್ಳಿಯ ಸ್ಥಿತಿಗತಿಗಳೇನೆಂಬುದನ್ನು ವಿಚಾರಿಸಿದರೆ ತಮ್ಮ ದಣಿಗಳು ಆಮೇಲೆ ಆಕ್ಷೇಪಣೆ ಮಾಡಬಹುದೆಂದು '' ನಮಗೆ ಗೊತ್ತಿಲ್ಲ ಸ್ವಾಮಿ'' ಎಂದು ಹೇಳುತ್ತಾರೆ. ಇದನ್ನು ಸಂಪೂರ್ಣವಾಗಿ ಶೋಧಿಸಬೇಕು. ಬಡವರ ಉದ್ಧಾರವಾಗಬೇಕು. ಅಂತಹ ಸುಧಾರಣೆಗಳನ್ನು ಮಾಡಬೇಕು. ಮಾನ್ಯಮಂತ್ರಿಗಳು ಒಂದು ಕಡೆ ಒಬ್ಬ ಅಧಿಕಾರಿಯನ್ನು ಒಂದು ಎಕರೆಗೆ ಗೇರುಬೀಜ ಎಷ್ಟು ಆಗಬಹುದು ಎಂದು ಕೇಳಿದಾಗ ಅವರು ಒಂದು ಎಕರೆಗೆ 80 ಮುಡಿ ಆಗಬಹುದು ಎಂದು ಕೂಡಲೆ ಹೇಳಿದರು. ನಿಜವಾಗಿ ಎಂಟು ಮುಡಿ ಆಗುವಂಥಾದ್ದಕ್ಕೆ 80 ಮುಡಿ ಎಂದು ಹೇಳಿದರು. ಇಂತಹ ಅನುಭವವನ್ನಿಟ್ಟುಕೊಂಡು ಕೆಲಸ ಸಾಧನೆಮಾಡುವುದಕ್ಕೆ ಹೋದರೆ ಎಷ್ಟು ಅನನುಕೂಲವಾಗಬಹುದೆಂಬುದನ್ನು ತಿಳಿಯಬೇಕು.

ಇನ್ನೊಂದು ವಿಚಾರ. ಉಪಾಧ್ಯಾಯರ ವಿಷಯದಲ್ಲಿ ಅನೇಕ ಸದಸ್ಯರು ಬಹಳವಾಗಿ ಮಾತನಾಡಿದ್ದಾರೆ. ಆದರೆ ನಾನು ಕೆಲವು ಅಂಕಿ ಅಂಶಗಳ ಮೂಲಕ ಅದರ ವಿಚಾರವಾಗಿ ಹೇಳಲು ಇಷ್ಟಪಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಜನಸಾಮಾನ್ಯರಲ್ಲಿ ಒಂದು ತಿಳುವಳಿಕೆಯನ್ನುಂಟುಮಾಡಿ, ದೇಶದ ಅಡಿಗಲ್ಲು ಇದ್ದಹಾಗೆ, ಮಕ್ಕಳನ್ನು ಯೋಗ್ಯ ಪ್ರಜೆಯನ್ನಾಗಿ ಮಾಡುವ ನಮ್ಮ ಉಪಾಧ್ಯಾಯರ ಮೇಲೆ ನಮ್ಮ ಸರ್ಕಾರದವರು ವಿಶೇಷವಾದ ಅಭಿಮಾನವನ್ನಿಟ್ಟು ಅವರಿಗೆ ಸಮಾಜದಲ್ಲಿ ತಕ್ಕ ಸ್ಥಾನಮಾನವನ್ನು ಕಲ್ಪಿಸಿಕೊಡಬೇಕಾದುದು ಸರ್ಕಾರದ ಆದ್ಯಕರ್ತವ್ಯವಾಗಿದೆ. ಅವರಿಗೆ ಸರಿಯಾಗಿ ಊಟ, ಬಟ್ಟೆಗೆ ಅವಕಾಶವಿಲ್ಲ, ಕಾಲಕ್ಕೆ ತಕ್ಕ ಸಂಬಳವಿಲ್ಲ. ಪಟ್ಟಣಗಳಲ್ಲಿರುವವರಿಗೆ ಬೇಕಾದಷ್ಟು ಅನುಕೂಲಗಳು ದೊರೆಯುತ್ತಿಲ್ಲ. ಹಳ್ಳಿಗಾಡಿನ ಉಪಾಧ್ಯಾಯರಿಗೂ ಪಟ್ಟಣಗಳಲ್ಲಿರುವ ಉಪಾಧ್ಯಾಯರಿಗೂ ಜೀವನಕ್ಕೆ ಸಾಕಷ್ಟು ಸಂಬಳ ಮತ್ತು ಸೌಕರ್ಯಗಳನ್ನು ಒದಗಿಸಿಕೊಡಬೇಕು. ಈಗ ಮೈಸೂರಿನಲ್ಲಿ ಎಸ್. ಎಸ್. ಎಲ್. ಸಿ. ಟ್ರೈನಿಂಗ್ ಆದ ಉಪಾಧ್ಯಾಯನಿಗೆ 50 ರಿಂದ 100 ರೂಪಾಯಿ ಸಂಬಳವಿರುತ್ತದೆ. ಅಷ್ಟೇ ಅರ್ಹತೆಯುಳ್ಳ ಉಪಾಧ್ಯಾಯನಿಗೆ ನಮ್ಮ ಜಿಲ್ಲೆಯಲ್ಲ ಏಡೆಡ್ ಶಾಲೆಯಲ್ಲಿ 42—48 ರೂಪಾಯಿ ಸಂಬಳವಿದೆ. ಎಸ್. ಎಸ್. ಎಲ್. ಸಿ. ಆಗದೆ ಟ್ರೈನಿಂಗ್ ಪಡೆದ ಉಪಾಧ್ಯಾಯನಿಗೆ 40—80 ರೂಪಾಯಿಗಳ ಸಂಬಳ ಮೈಸೂರಿನಲ್ಲಿವೆ. ನಮ್ಮಲ್ಲಿಯ ಏಡೆಡ್ ಶಾಲೆಯಲ್ಲಿ ಅಂತಹವನಿಗೆ 30—33 ರೂಪಾಯಿ ಸಂಬಳವಿರುತ್ತದೆ. ನಮ್ಮಲ್ಲಿ S.S.L.C. ಆಗದ ಅನ್‌ಟ್ರೈನ್ಡ್ ಉಪಾಧ್ಯಾಯರುಗಳಿಲ್ಲ. ಅಂತಹವರಿಗೆ ಮೈಸೂರಿನಲ್ಲಿ 40—60 ರೂಪಾಯಿಗಳ ಸಂಬಳವನ್ನು ಕೊಡುತ್ತಾರೆ. ಇದನ್ನು ಸರ್ಕಾರದ ಗಮನಕ್ಕೆ ತಂದು ಇಂದಿಗೆ ಎಂಟು ತಿಂಗಳುಗಳಾದುವು. ಈಗ ಒಂದು ವರ್ಷಕ್ಕೆ ಹತ್ತಿರ ಬರುತ್ತಿದೆ. ಸರ್ಕಾರದವರು ನಮ್ಮ ಬಡ ಉಪಾಧ್ಯಾಯರ ಸ್ಥಿತಿಯನ್ನು ಉತ್ತಮ ಮಟ್ಟದಲ್ಲಿ ತರಲು ಸರ್ವ ಪ್ರಯತ್ನಗಳನ್ನೂ ಮಾಡಬೇಕಾಗಿದೆ. ಮಲತಾಯಿ ಮಕ್ಕಳ ದೃಷ್ಟಿಯಿಂತೆ ಕಾಣುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಹಳ್ಳಿಗಳ ಬಡ ಉಪಾಧ್ಯಾಯರ ವಿಷಯದಲ್ಲಿ ಹೆಚ್ಚು ನಿಗಾ ಕೊಟ್ಟು ಈ ಕಾರ್ಯಭಾರವನ್ನು ನಿರ್ವಹಿಸುವುದಕ್ಕೆ ಪ್ರಯತ್ನಪಡಬೇಕೆಂದು ಹೇಳಿ, ನನಗೆ ಈ ದಿವಸ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಒದಗಿಸಿಕೊಟ್ಟುದಕ್ಕಾಗಿ ತಮ್ಮನ್ನು ವಂದಿಸಿ, ತಮ್ಮ ಅಮೂಲ್ಯವಾದ ಕಾಲವನ್ನು ಹೆಚ್ಚಾಗಿ ತೆಗೆದುಕೊಳ್ಳದೆ, ರಾಜ್ಯಪಾಲರ ಭಾಷಣಕ್ಕೆ ನನ್ನ ಸಂಪೂರ್ಣ ಅನುಮೋದನೆಯನ್ನು ಸೂಚಿಸುತ್ತ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

*ಶ್ರೀಮತಿ ರತ್ನಮ್ಮ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣ ಬಹಳ ಉತ್ತಮ

(ಶ್ರೀಮತಿ ರತ್ನಮ್ಮ)

ಮಟ್ಟದಲ್ಲಿದೆ. ಮಾನ್ಯ ಮಿತ್ರರೊಬ್ಬರು ಭಾಷಣ ಮಾಡುವಾಗ ಪ್ರತಿವರ್ಷವೂ ಭಾಷಣ ಒಂದೇ ರೀತಿ ಯಲ್ಲಿದೆ ಮತ್ತು ಯಾವ ತರಹ ವ್ಯತ್ಯಾಸವೂ ಇಲ್ಲ ಎಂದು ಹೇಳಿದರು. ಆದರೆ ನನಗೆ ಹಾಗೆ ಅನ್ನಿಸುವು ದಿಲ್ಲ. ಈಗಾಗಲೇ ಮೊದಲನೆಯ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗಿ ನೆರವೇರಿ, ದ್ವಿತೀಯ ಪಂಚ ವಾರ್ಷಿಕ ಯೋಜನೆಯನ್ನು ರಾಜ್ಯಪಾಲರು ನಮ್ಮಮುಂದೆ ಇಟ್ಟಿದ್ದಾರೆ. ಈ ದ್ವಿತೀಯ ಪಾಂಚ ವಾರ್ಷಿಕ ಯೋಜನೆಯೂ ಯಶಸ್ವಿಯಾಗಿ ನೆರವೇರ ಬೇಕಾದರೆ, ಪ್ರತಿಯೊಬ್ಬ ರಾಷ್ಟ್ರಪ್ರೇಮಿಯ ನೆರವೂ ಅತ್ಯಗತ್ಯವಾಗಿ ಬೇಕಾಗಿದೆ. ಅದು ಪ್ರತಿಯೆನೆರವು ರಾಷ್ಟ್ರಪ್ರೇಮಿಯ ಪವಿತ್ರ ಕರ್ತವ್ಯವಾಗಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಿ ನೆರ ವೇರಿ, ಫಲಪ್ರದಾಯಕವಾಗಿ ಜನ ಸಾಮಾನ್ಯರ ಆರ್ಥಿಕ ಏಳಿಗೆಯಾಗಬೇಕಾದರೆ ಪ್ರತಿಯೊಬ್ಬ ಪ್ರಜೆಯೂ ಕೂಡ ತನ್ನ ತ್ಯಾಗ ಮನೋಭಾವನೆಯನ್ನು ತೋರಬೇಕು. ಅಂತಹ ತ್ಯಾಗ ಮನೋಭಾವನೆಯು ಜನತೆಗೆ ಜಾಗ್ರತೆಯಾಗಿ ಬರಬೇಕಾದರೆ, ಮೊಟ್ಟಮೊದಲನೆಯ ದಾಗಿ ಜನರ ಪ್ರತಿನಿಧಿಗಳಾಗಿರುವ ನಾವು ಮೊದಲು ತ್ಯಾಗಮಾಡಿ ಪ್ರಜೆಗಳಿಗೆ ಮಾರ್ಗದರ್ಶಕರಾಗ ಬೇಕಾಗಿದೆ. ವಿಧಾನಸಭಾ ಸದಸ್ಯರುಗಳಾದ ನಾವು ನಮಗೆ ಬರುವ ವರಮಾನದಲ್ಲಿ ಶೇಕಡ ಹತ್ತರಷ್ಟನ್ನು ಕಡಮೆ ಮಾಡುವ ಮನಸ್ಸುಮಾಡೋಣ ಮತ್ತು ಅದ ರಂತೆಯೇ ಮುಖ್ಯ ಮಂತ್ರಿಗಳೂ, ಇತರ ಮಂತ್ರಿಗಳೂ, ಅಧ್ಯಕ್ಷರೂ, ಸಭಾಪತಿಗಳೂ—ಹೀಗೆ ಎಲ್ಲರೂ ತಮ್ಮ ತಮ್ಮ ವರಮಾನದಲ್ಲಿ ಶೇಕಡ 10 ರಷ್ಟು ಕಡಮೆಮಾಡಿ ಕೊಳ್ಳುವ ಮನಸ್ಸನ್ನು ಮಾಡಲಿ. ಆದರೆ 500 ರೂಪಾಯಿಗಳ ಸಂಬಳ ಮೇಲ್ಪಟ್ಟು ಇರುವ ಅಧಿಕಾರಿ ಗಳನ್ನು ತಮ್ಮ ಸಂಬಳದಲ್ಲಿ ಶೇಕಡ ಹತ್ತು ರಷ್ಟು ಕಡಮೆ ಮಾಡಿಕೊಳ್ಳಿ ಎಂದು ಹೇಳುವುದಿಲ್ಲ. ಏಕೆಂದರೆ ಅವರಿಗೆ ಎಷ್ಟೋ ತೊಂದರೆಗಳಿರುತ್ತವೆ. I.A.S. ಲಿಸ್ಟಿ ನಲ್ಲಿರುವುದಿಲ್ಲ. ಅವರು ಶೇಕಡ ಹತ್ತರಂತೆ ನಾವೂ ಕೂಡ ಕೊಡಬೇಕಾಗಿದೆಯಲ್ಲಾ ಎಂದುಕೊಳ್ಳುವುದೂ ಬೇಡ. ಅವರು ಸ್ವಲ್ಪಮಾತ್ರ ತಮ್ಮ ವರಮಾನದಲ್ಲಿ ಕಡಮೆಮಾಡಿಕೊಂಡು ತಮ್ಮ ರಾಷ್ಟ್ರ ಪ್ರೇಮವನ್ನು ಈ ಮೂಲಕ ತೋರಿಸಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಎಲ್ಲಾ ಬಾಬುಗಳಿಂದಲೂ ನಮಗೆ ಹೆಚ್ಚಾಗಿ ಹಣ ಉಳಿತಾಯವಾಗದೆ ಇದ್ದರೂ, ನಮ್ಮಿಂದ ಸ್ವಲ್ಪ ಉಳಿತಾಯವಾಗುತ್ತಿದೆ ಎಂಬ ನಮ್ಮ ತ್ಯಾಗ ಮನೋಭಾವ ಪ್ರಜೆಗಳಿಗೆ ಬೆಳಕಿಗೆ ಬಂದರೆ, ಆಗ ಪ್ರಜೆಗಳ ಬೆಂಬಲ ಸಿಕ್ಕಿಯೇ ಸಿಕ್ಕುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಈಗಾಗಲೇ ಮಲೆನಾಡಿನ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಲೆನಾಡಿನ ಪ್ರದೇಶದಿಂದ ಬಂದಿರುವವರು ಒಬ್ಬರು ಮಂತ್ರಿ ಮಂಡಲದಲ್ಲಿ ಇದ್ದಾರೆ. ಮಲೆನಾಡಿನ ಸಮಸ್ಯೆಗಳನ್ನು ನಮ್ಮ ಮಂತ್ರಿ ಮಂಡಳದವರು ಚೆನ್ನಾಗಿ ಅರಿತು ಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಮಂತ್ರಿಗಳು ಪ್ರವಾಸಮಾಡಿ ರಸ್ತೆಗಳ ತೊಂದರೆ ಎಷ್ಟಿದೆಂಬುದನ್ನು ಅರಿತಿದ್ದಾರೆ. ಮೊನ್ನೆ ತಾನೆ ನಡೆದ ಮಲೆನಾಡು ಸಮ್ಮೇಳನಕ್ಕೆ ಬಂದ ಎಲ್ಲ ಮಂತ್ರಿಗಳು ಮಳೆಗಾಲದಲ್ಲಿ ರಸ್ತೆಗಳ ತೊಂದರೆ ಎಷ್ಟೆಂಬುದನ್ನು ಅರಿತಿದ್ದಾರೆ. ಆದಕಾರಣ ಈ ವಿಷಯ ವನ್ನು ವಿವರವಾಗಿ ಹೇಳಬೇಕಾದ ಅಗತ್ಯವಿಲ್ಲವೆಂದು ತಿಳಿದುಕೊಂಡಿದ್ದೇನೆ. ಮಲೆನಾಡಿನ ಅಭಿವೃದ್ಧಿ ಕಾರ್ಯವನ್ನು ತೀವ್ರವಾಗಿ ಕೈಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಶಿವಮೊಗ್ಗಕ್ಕೆ ಫಸ್ಟ್ ಗ್ರೇಡ್ ಕಾಲೇಜ್ ಈಗ ಕೊಟ್ಟಿದ್ದಾರೆ. ಎಲ್ಲ ಕಡೆಗಳಿಂದಲೂ ವಿದ್ಯಾರ್ಥಿಗಳು ಬರುವವ ರಿದ್ದಾರೆ. ಕಾಲೇಜು ಊರಿಂದ ನಾಲ್ಕು ಮೈಲಿ ದೂರದಲ್ಲಿದೆ, ಊರಿನಲ್ಲಿ ರಾಮಣ್ಣಶೆಟ್ಟಿ ಪಾರ್ಕ್ ಬಳಿ ತುಂಗಾನದಿಗೆ ಸೇತುವೆಯೊಂದನ್ನು ಮಾಡಿದರೆ ಕೇವಲ ಎರಡು ಫರ್‌ಲಾಂಗಿನಲ್ಲಿ ಕಾಲೇಜಿಗೆ ಹೋಗಲು ಅನುಕೂಲವಾಗುತ್ತದೆ. ದೊಡ್ಡ ಸೇತುವೆ ಮಾಡುವು ದಾದರೆ ಬಹಳ ಸಂತೋಷ. ಹಣಕಾಸಿನ ಪರಿಸ್ಥಿತಿ ಯಿಂದ ಆಗದಿದ್ದರೆ ಪಾದಚಾರಿ ಸೇತುವೆ (Foot-bridge) ಆದರೂ ಮಾಡಬೇಕಾಗಿ ವಿನಂತಿ. ಕಾಲೇಜನ್ನು ಮಾಡುವಾಗಲೇ ಸರ್ ಮಿರ್ಜಾ ಇಸ್ಮೈಲರು ಈ ಸೇತುವೆಯನ್ನು ಮಾಡಬೇಕೆಂಬ ಯೋಚನೆಯನ್ನಿಟ್ಟುಕೊಂಡೇ ಈ ಕಾಲೇಜನ್ನು ಸ್ಥಾಪಿಸಿದ್ದರು.

ಮಳೆಗಾಲದಲ್ಲಿ ಊರಾಚೆ ಇರುವ ಊರಗಡೂರು, ಮದಾರಿಪಾಳ್ಯ, ಇನ್ನು ಕೆಲವು ಹಳ್ಳಿಗಳಿಗೆ ನದಿಯಿಂದ ಉಕ್ಕಡದಲ್ಲಿ ದಾಟುವಾಗ ವರ್ಷವೂ ಎಂಟು ಹತ್ತು ಮಾರಣಗಳಾಗುತ್ತವೆ. ಈ ಎಲ್ಲ ದೃಷ್ಟಿಯಿಂದ ಈ ಸೇತುವೆ ಜಾಗ್ರತೆ ಮಾಡಿಕೊಡಬೇಕೆಂದು ಪ್ರಾರ್ಥಿ ಸುತ್ತೇನೆ.

ಶಿವಮೊಗ್ಗಾದಲ್ಲಿ ಒಂದು ಹೆಲ್ತ್ ಯೂನಿಟ್ ಆಗುವ ಅವಕಾಶ ದೊರಕಿಸಿಕೊಡಬೇಕೆಂದು ಆರೋಗ್ಯ ಮಂತ್ರಿ ಯವರನ್ನು ಕೇಳಿಕೊಳ್ಳುತ್ತೇನೆ. ರಾಜ್ಯಪಾಲರವರ ಭಾಷಣಕ್ಕೆ ಅನುಮೋದನೆಯನ್ನು ಕೊಟ್ಟು ಮಾತ ನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದನೆ ಗಳನ್ನು ಅರ್ಪಿಸಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಮಾನ್ಯ ಅಧ್ಯಕ್ಷರೇ ಮೊನ್ನೆಯ ದಿವಸ ಉಭಯ ಸದನ ಗಳನ್ನು ಉದ್ದೇಶಿಸಿ ರಾಜ್ಯಪಾಲರವರು ಮಾಡಿದ ಭಾಷಣದಲ್ಲಿ ಯಾವ ಮಹತ್ವಪೂರ್ಣವಾದ ಅಂಶವು ಅಡಕವಾಗಿಲ್ಲ. ಬಡವರ ಯೋಗಕ್ಷೇಮ ಮತ್ತು ಬಡವರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಯಾವುದೂ ಅವರ ಭಾಷಣದಲ್ಲಿ ಹೇಳಿಲ್ಲ. ಬಡವರಿಗೆ ಊಟ, ವಸತಿ, ಬಟ್ಟೆ ಮುಂತಾದವುಗಳನ್ನು ಒದಗಿಸಿ ಕೊಡಬೇಕಾದುದು ಸರಕಾರದ ಆದ್ಯ ಕರ್ತವ್ಯವಾಗಿದೆ. ಈ ವಿಷಯದ ವಿಚಾರವಾಗಿ ಸರಕಾರದವರು ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದು ರಾಜ್ಯ ಪಾಲರವರ ಭಾಷಣದಿಂದ ಗೊತ್ತಾಗುವುದಿಲ್ಲ. ಆದ ಕಾರಣ ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯವನ್ನು ಅನುಮೋದಿಸಲು ಆಗುವು ದಿಲ್ಲ.

ಪಂಚವಾರ್ಷಿಕ ಯೋಜನೆಯ ಸಲುವಾಗಿ ಕೋಟ್ಯಂ ತರ ರೂಪಾಯಿಗಳನ್ನು ಸರಕಾರದವರು ಖರ್ಚು ಮಾಡುತ್ತಿದ್ದಾರೆ. ಆದರೆ ಹೆಚ್ಚು ಆಹಾರ ಉತ್ಪಾ ದನೆಗೆ ಸರಕಾರದವರು ಶ್ರಮ ವಹಿಸುತ್ತಿಲ್ಲ. ಆಹಾರ ಉತ್ಪತ್ತಿಯ ಕಡೆಗೆ ಗಮನ ಕೊಡುತ್ತಿಲ್ಲ ಎಂದು ಹೇಳ ಬೇಕಾಗಿದೆ. ಏಕೆಂದರೆ ಪರದೇಶದಿಂದ ಆಹಾರ ಧಾನ್ಯಗಳನ್ನು ತರಿಸುತ್ತಿದ್ದಾರೆ. ಪರದೇಶದಿಂದ ಆಹಾರ ಧಾನ್ಯ ತರಿಸುವುದನ್ನು ತಪ್ಪಿಸುವುದಕ್ಕೆ ಸರ ಕಾರ ಪ್ರಯತ್ನ ಮಾಡಬೇಕು. ಆಹಾರದ ವಿಷಯದಲ್ಲಿ ನಮ್ಮ ದೇಶವು ಸ್ವಯಂ ಪೂರ್ಣವಾಗಿರಬೇಕು. ನಮ್ಮ ದೇಶದಲ್ಲಿಯೇ ಆಹಾರದ ಉತ್ಪತ್ತಿಯನ್ನು ಹೆಚ್ಚಿಸ ಬೇಕು. ಈ ವಿಷಯದ ಬಗ್ಗೆ ತಕ್ಕ ಕ್ರಮವನ್ನು ಸರ ಕಾರದವರು ಕೈಕೊಳ್ಳಬೇಕು. ಆಹಾರ ಧಾನ್ಯದ ಉತ್ಪತ್ತಿಯನ್ನು ಹೆಚ್ಚಿಸಲು ಕೆರೆಗಳ ಜೀರ್ಣೋದ್ಧಾರ

ಮಾಡುವ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಕೆರೆಗಳು ಬಹಳ ಹೀನ ಸ್ಥಿತಿಯಲ್ಲಿ ಇವೆ. ಕೆರೆಗಳ ದುರಸ್ತಿಯಾದರೆ ನೀರಿನ ಸೌಲಭ್ಯವು ದೊರೆತು ಹೆಚ್ಚು ಧಾನ್ಯ ಉತ್ಪತ್ತಿಗೆ ಸಹಾಯವಾಗುವುದು.

ಜಿಲ್ಲಾ ಬೋರ್ಡುಗಳನ್ನು 1954ರಲ್ಲಿ ರದ್ದುಮಾಡಿ ಆಗಿನಿಂದಲೂ ಸ್ಪೆಷಲ್ ಆಫೀಸರ್ ನೇಮಕಮಾಡಿ ಕೆಲಸ ನಡೆದಿದೆ. ಈಗಿನ ಪ್ರಜಾಪ್ರಭುತ್ವದ ಕಾಲದಲ್ಲಿ ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಿರುವುದೂ ಮತ್ತು ಚುನಾವಣೆಗಳನ್ನು ನಡೆಸದೇ ಇದ್ದದ್ದೂ ಬಹಳ ಅನ್ಯಾಯವಾದದ್ದು. ಸಲಹಾ ಸಮಿತಿಗಳನ್ನು ನೇಮಕ ಮಾಡಿರುವುದು ನ್ಯಾಯವಾದುದಲ್ಲ. ಆದ ಕಾರಣ ಜಿಲ್ಲಾ ಬೋರ್ಡುಗಳ ಚುನಾವಣೆಗಳು ತೀವ್ರವಾಗಿ ನಡೆಯುವಂತೆ ಮಾಡಬೇಕು.

ಈ ಸಂದರ್ಭದಲ್ಲಿ ಇನ್ನೊಂದು ಮಹತ್ವದ ವಿಷಯ ಹೇಳುವುದೇನೆಂದರೆ ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಹಂಚಲಾಗಿದೆ ಎಂದು ಮಾನ್ಯ ಮಂತ್ರಿಯವರಾದ ಶ್ರೀ ಮರಿಯಪ್ಪ ಅವರು ಹೇಳಿದರು. ಆದರೆ ಭೂಮಿಯಿಲ್ಲದ ಬಡಜನರಿಗೆ ಭೂಮಿಯು ಹಂಚಲ್ಪಡದೆ ರಾಜಕೀಯ ಸಂತ್ರಸ್ತರೆಂಬ ಹೆಸರಿನ ಮೇಲೆ ಭೂಮಿಯನ್ನು ಸಾಗುಮಾಡದೇ ಇರುವವರಿಗೆ ಭೂಮಿಯನ್ನು ಕೊಡಲಾಗಿದೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ನಾನು ಹಾಗೆ ಹೇಳಲಿಲ್ಲ. ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಹಂಚುವ ವಿಷಯ ಬಂದಿತ್ತು. ಅದು ಭೂಮಿಯಿಲ್ಲದವರಿಗೆ ಭೂಮಿಯನ್ನು ಕೊಡುವ ವಿಷಯ ಆಗಿರಲಿಲ್ಲ. ರಾಜಕೀಯ ಸಂತ್ರಸ್ತರಾದವರಿಗೆ ಭೂಮಿಯಿಲ್ಲದಿದ್ದರೆ ಭೂಮಿಯನ್ನು ಕೊಡುವುದು ಅದಾಗಿದೆ.

ಶ್ರೀ ಬಿ. ಚಾಮಯ್ಯ.—ನಾನು ಹೇಳುತ್ತಿದ್ದುದು ಬಡವರಿಗೆ ಭೂಮಿಯನ್ನು ಕೊಟ್ಟಿಲ್ಲ ಎಂದು. ಗ್ರಾಮದಿಂದ 20-30 ಮೈಲು ದೂರ ಇರುವವರಿಗೆ ಭೂಮಿಯನ್ನು ಕೊಡಲಾಗಿದೆ. ಜಮೀನು ಇರುವ ಗ್ರಾಮದ ರೈತರಿಗೆ ಜಮೀನು ಕೊಟ್ಟ ಬಗ್ಗೆ ಅನೇಕ ನಿದರ್ಶನಗಳು ಇವೆ. ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ದೇಶದಲ್ಲಿ ನೆಮ್ಮದಿ, ಶಾಂತಿ ನೆಲೆಸುವಂತೆ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ವಿರಾಮಕಾಲದ ಅನಂತರ ಎಂದರೆ 10-30 ಗಂಟೆಯ ಅನಂತರ ನಿರ್ಣಯವನ್ನು ಮಂಡಿಸಿರುವ ಸದಸ್ಯರು ಮತ್ತು ಮಂತ್ರಿಗಳು ಭಾಷಣ ಮಾಡುತ್ತಾರೆ. ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯದ ಮೇಲೆ ನಡೆದ ಚರ್ಚೆಯಲ್ಲಿ ಇಲ್ಲಿಯ ವರೆಗೆ ಒಟ್ಟು 46 ಸದಸ್ಯರು ಮಾತನಾಡಿ ಭಾಗವಹಿಸಿದ್ದಾರೆ. ಇದರಲ್ಲಿ ಆರು ಮಹಿಳೆಯರು ಭಾಷಣ ಮಾಡಿದ್ದಾರೆ. ಮಹಿಳೆಯರಿಗೆ ಸಾಕಷ್ಟು ಅವಕಾಶ ದೊರೆತಿದೆ ಎಂದು ನಾನು ಭಾವಿಸಿದ್ದೇನೆ. ಈ ಚರ್ಚೆಯಲ್ಲಿ 22 ಜನ ಕಾಂಗ್ರೆಸ್ ಪಕ್ಷದ ಸದಸ್ಯರೂ ಮತ್ತು 24 ಜನ ವಿರೋಧಿ ಪಕ್ಷದ ಸದಸ್ಯರೂ ಭಾಗವಹಿಸಿದ್ದಾರೆ. ಈಗಾಗಲೇ ನಾಲ್ಕು ದಿವಸಗಳವರೆಗೆ ಈ ಚರ್ಚೆ ನಡೆದಿದೆ ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯದ ಮೇಲೆ ಮಾತನಾಡಲು ಇನ್ನೂ ಎರಡು ದಿವಸ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಪಾರ್ಲಿಮೆಂಟಿನಲ್ಲಿ 500 ಸದಸ್ಯರು ಇದ್ದರೂ ಸಹ ಇಂಥ ನಿರ್ಣಯದ ಮೇಲೆ ಚರ್ಚೆಯು ಎರಡು ದಿವಸಗಳ ವರೆಗೆ ಮಾತ್ರ ನಡೆಯುವುದು. ಈ ಸಭೆಯಲ್ಲಿ ಹೆಚ್ಚು ದಿವಸಗಳು ಯಾಕೆ ಬೇಕೆಂಬುದು ನನಗೆ ಅರ್ಥವಾಗುವುದಿಲ್ಲ. ಈ ಚರ್ಚೆ ಎರಡು ದಿವಸಗಳ ವರೆಗೆ ಮಾತ್ರ ನಡೆಯಬೇಕು ; ಎಲ್ಲ ಸದಸ್ಯರಿಗೂ ಮಾತನಾಡಬೇಕೆಂದು ಇಚ್ಛೆ ಇದೆ. ಆದರೆ ಕಾಲಾವಕಾಶದ ಪರಿಮಿತಿಯು ಇರುವುದರಿಂದ ಅದಕ್ಕೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಇನ್ನು ಮೇಲೆ ಯಾರೂ ಮಾತನಾಡಲು ಏಳಬಾರದು. ನಿರ್ಣಯವನ್ನು ಮಂಡಿಸಿದ ಸದಸ್ಯರು ಮತ್ತು ಮಂತ್ರಿಗಳು ಮಾತನಾಡಿ ಚರ್ಚೆಗೆ ಉತ್ತರ ಕೊಡಲಿ. ಮೂರು-ನಾಲ್ಕು ಮಂತ್ರಿಗಳು ಮಾತನಾಡುವವರು ಇದ್ದಾರೆ. ಆದುದರಿಂದ ಈಗ ಅರ್ಧಗಂಟೆಯ ವಿರಾಮಕಾಲ ತೆಗೆದುಕೊಂಡು 10-30 ಗಂಟೆಗೆ ಮತ್ತೆ ಕೂಡೋಣ.

The House rose at Ten of the Clock and reassembled at Thirty Minutes past Ten of the Clock.

[MR. SPEAKER in the Chair.]

MEMBERS SWORN

1. Sri B. Sham Sundar (Bhalki S. C.)
2. Sri S. P. Talwalkar (Raibag S. C.)

MOTION ON GOVERNOR'S ADDRESS (*Debate contd.*)

SRI H. S. RUDRAPPA (Minister for Agriculture).—Mr. Speaker, before we proceed I want to know the procedure to be followed. I want to know whether all the Ministers can speak or only one Minister can speak on behalf of the Government.

MR. SPEAKER.—The time allowed is about one hour for the reply. If the Hon'ble Minister who wants to give reply on behalf of the Government were to adjust the time and allow other Ministers to speak, I have no objection. Otherwise, if the other Ministers want to speak, that will be taken as intervening in the debate.

SRI B. K. PUTTARAMIYA (Channapatna).—Sir, I rise on a point of order, ನಾವು ಭಾಷಣಮಾಡುವಾಗ ಮಾನ್ಯ ಮಿತ್ರರು ಇಂಟರಪ್ಟ್ ಮಾಡಿ ನಮ್ಮ ಆಲೋಚನೆಯನ್ನು ಹಾಳು ಮಾಡುತ್ತಾರೆ. ಅದಕ್ಕೆ ಮಾನ್ಯ ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು.

ನನ್ನ ಪಾಯಿಂಟ್ ಆಫ್ ಆರ್ಡರ್ ಇದು : ರಾಜ್ಯಪಾಲರು ಭಾಷಣ ಮಾಡಿದ್ದು ಜಂಟಿ ಅಧಿವೇಶನದಲ್ಲಿ. ಆಗ ಎರಡು ಸಭೆಗಳವರೂ ಇಲ್ಲಿ ಹಾಜರಿದ್ದರು. ಈಗ ಅವರಿಗೆ ವಂದನೆಯನ್ನು ತಮ್ಮ ಮೂಲಕ ಅರ್ಪಿಸಬೇಕಾಗಿದೆ. ಅಧ್ಯಕ್ಷರು ನಮ್ಮ ವಂದನೆಯನ್ನು ರಾಜ್ಯಪಾಲರಿಗೆ ತಲುಪಿಸಿದ ಮೇಲೆ ಅವರು ಸಂಪ್ರ